the prices of food items served in various hotels and restaurants. Besides hotels and restaurants are now being treated as an 'industry', Hence, they are required to manage on business lines i.e., profit and loss basis.

Regarding the hygiene in the hotels and restaurants it is stated that it comes under the control of local self governing bodies viz., the Municipalities and Corporations. The Health Departments of the Municipalities and Corporations will be requested through the concerned Administrative Department of the Government to take measures for improving the hygiene in the hotels and restaurants.

ಖಾಸಗಿ ಕಾರ್ಯಕಲಾಪಗಳು

ರಾಜ್ಯದಲ್ಲಿ ನಿಸರ್ಗ ಸಂಪತ್ತಾದ ಗ್ರ್ಯಾನೈಟ್ ಕಲ್ಲುಗಳ ವ್ಯವಹಾರವನ್ನು ರಾಷ್ಟ್ರೀಕರಣ ಗೊಳಿಸಲು ಒತ್ತಾಯ

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಸನ್ಮಾನ್ಯ ಅಧ್ಯಕ್ಷಿಣಿಯವರೆ. ಈ ನಿರ್ಣಯದ ಬಗ್ಗೆ ನಾನು ಈಗಾಗಲೇ ಹೋದ ಸಭೆಯಲ್ಲಿ ಚರ್ಚೆಯನ್ನು ಪ್ರಾರಂಭಿಸಿದ್ದೇನೆ. ಈ ನಿರ್ಣಯ ಈ ಸಭೆಯಲ್ಲಿ ಬಂದು ಒಂದು ಹಂತದಲ್ಲಿ ಚರ್ಚೆಯ ವಸ್ತುವಾಗಿ ಇಲ್ಲಿ ಇದೆ ಈ ನಿರ್ಣಯ ಯಾವ ಹಂತಕ್ಕೆ ತಲುಪಿದೆ ಎಂದು ಗೊತ್ತಿಲ್ಲ. ಏಕೆಂದರೆ ಇನ್ನೂ ಅನೇಕ ಮಾನ್ಯ ಸದಸ್ಯರು ಇದರ ಬಗ್ಗೆ ಮಾತನಾಡುವವರಿದ್ದಾರೆ. ಈ ನಿರ್ಣಯ ಅಂತಿಮವಾಗಿ ಬಹುಮತದಿಂದ ತೀರ್ಮಾನವಾಗುತ್ತದೆಯೋ ಅಥವಾ ಅಲ್ಪ ಮತದಿಂದ ಬಿದ್ದುಹೋಗುತ್ತದೆಯೋ ಗೊತ್ತಿಲ್ಲ. ಈ ಸಭೆ ಅತ್ಯಂತ ಸಾರ್ವಭೌಮತ್ವವನ್ನು ಹೊಂದಿರತಕ್ಕ ಸಭೆ. ಈ ಸಭೆಯಲ್ಲಿ ಈ ಒಂದು ನಿರ್ಣಯವನ್ನು ಮಂಡಿಸಿ ಅದರ ಪರಿಸ್ಥಿತಿ ಏನಾಗಿದೆ ? ಸರ್ಕಾರ ಒಂದು ಕಡೆ ಸಭೆಯನ್ನು ಗಮನಕ್ಕೆ ತೆಗೆದುಕೊಳ್ಳದೆ ಈ ನಿರ್ಣಯವನ್ನು ಇನ್ನೂ ಸಭೆಯಲ್ಲಿಯೇ ಇಟ್ಟಿರುವಾಗ ತರಾತುರಿಯಿಂದ ಸಚಿವ ಸಂಪುಟದ ಸಭೆಯಲ್ಲಿ, ಇನ್ನೂ ನೂರಾರು ಪ್ರಮುಖವಾದಂಥ ಪ್ರಶ್ನೆಗಳ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳದೆ ಅವೆಲ್ಲವೂ ಪಟ್ಟಿಯಿಂದ ಹಿಂದೆ ಸರಿದು ಈ ಗ್ರ್ಯಾನೈಟ್ ಉದ್ಯಮವನ್ನು ಖಾಸಗೀಯವರಿಗೆ ವಹಿಸತಕ್ಕಂಥ, ಗುತ್ತಿಗೆ ಕೊಡತಕ್ಕಂಥ ನಿರ್ಣಯವನ್ನು ಸರ್ಕಾರದವರು ಕೈಗೊಂಡಿರತಕ್ಕಂಥ ಪರಿಸ್ಥಿತಿಯನ್ನು ನೋಡಿದರೆ, ನನಗೆ ಎರಡು ಸಂಶಯಗಳು ಉದ್ಭವವಾಗುತ್ತವೆ. ಈ ಸಭೆಗೆ ಅಗೌರವವನ್ನು ಸರ್ಕಾರ ತೋರಿಸಿ ಈ ಸಭೆಗೆ ಸರ್ಕಾರ ಚ್ಯುತಿ ತಂದಿದೆ. ಆದ್ದರಿಂದ ನಾನು ಪ್ರಥಮವಾಗಿ ಹಕ್ಕು ಚ್ಯುತಿ ಆರೋಪವನ್ನು ಮಾಡುತ್ತಿದ್ದೇನೆ. ನಾವು ಹಕ್ಕು ಚ್ಯುತಿ ನಿರ್ಣಯವನ್ನು ತೆಗೆದುಕೊಂಡು ಬರುತ್ತೇವೆಂದು ಹೇಳಿದರೆ, ಆ ನಿರ್ಣಯವನ್ನು ಸಭೆ ಸರ್ಕಾರಕ್ಕೆ ಒಪ್ಪಿಸಬೇಕಾಗುತ್ತದೆ. ನಿಜವಾಗಿಯೂ ಇಂಥ ಒಂದು ಎತ್ತರವಾದಂಥ ಉನ್ನತವಾದಂತ ಪರಂಪರೆಯನ್ನು ನಾವು ನಡೆಸಿಕೊಂಡು ಬಂದಿದ್ದೇವೆ. ಈ ಪರಂಪರೆಗೆ ಕೊಡಲಿಪೆಟ್ಟು ಹಾಕಿದ್ದಾರೆ. ಪ್ರಜಾಪ್ರಭುತ್ವದ ಒಂದು ಮನೆ ಇದು. ಈ ಮನೆಗೆ ಇರತಕ್ಕಂಥ ಘನತೆ ಗಾಂಭೀರ್ಯ ಒಂದು ವ್ಯಕ್ತಿತ್ವಕ್ಕೆ ಅವಹೇಳನ ಮಾಡಿ ನೀತಿ ನಿಯಮಗಳನ್ನು ಗಾಳಿಗೆ ತೂರಿ ತರಾತುರಿಯಿಂದ ಇಂಥ ಒಂದು ನಿರ್ಣಯವನ್ನು ತರತಕ್ಕಂಥ ಅವಶ್ಯಕತೆಯಾದರೂ ಏನು ಇತ್ತು ಎಂದು ನಾನು ಕೇಳಬೇಕಾಗುತ್ತದೆ ? ಇಂಥ ಒಂದು ಪ್ರಶ್ನೆಯನ್ನು ಎತ್ತಿ ಮಾತನಾಡುತ್ತಿರುವಾಗ ಇದನ್ನು ತಾವು ಗಮನಕ್ಕೆ ತೆಗೆದುಕೊಂಡು ನಮಗೆ ಮಾರ್ಗದರ್ಶನವನ್ನು ಕೊಡಬೇಕು. ಅಧ್ಯಕ್ಷರೇ ತಾವು ಈ ಸಭೆಯ ಅಧ್ಯಕ್ಷರಾಗಿದ್ದೀರಿ. ಈ ಸಭೆಯ ಘನತೆಯನ್ನು ಈ ಸಭೆಯ ಸಾರ್ವಭೌಮತ್ವವನ್ನು ಎತ್ತಿ ಹಿಡಿಯತಕ್ಕಂಥ ಒಂದು ಶಕ್ತಿಯಾಗಿ ತಾವು ಕುಳಿತಿದ್ದೀರಿ. ನನಗಂತೂ ಈ ಸಭೆಗೆ ಸರ್ಕಾರದಿಂದ ಅವಹೇಳನವಾಗಿದೆ ಅಪಚಾರವಾಗಿದೆ ಎಂದೆನಿಸುತ್ತದೆ. ಇವರು ಈ ಸಭೆಯ ಘನತೆಗೆ ಅತ್ಯಂತ ಘೋರ ಅನ್ಯಾಯ ಮಾಡಿದ್ದಾರೆ. ಅಲ್ಲದೆ ಈ ಸಭೆಯ ಹಕ್ಕಿಗೆ ಸಮಗ್ರವಾದ ಹಕ್ಕುಚ್ಯುತಿ ತಂದಿದ್ದಾರೆ. ಅಂದಮೇಲೆ ನಾನು ತಮ್ಮನ್ನು ಪ್ರಶ್ನೆ ಮಾಡಬೇಕಾಗುತ್ತದೆ. ಅಧ್ಯಕ್ಷರೇ ಒಂದು ಕಡೆ ಈ ನೈಸರ್ಗಿಕ ಸಂಪತ್ತನ್ನು ನಾಶಮಾಡಬಾರದೆಂದು, ನೈಸರ್ಗಿಕ ಸಂಪತ್ತಿನ ನಾಶವನ್ನು ತಪ್ಪಿಸಬೇಕೆಂದು ನಿರ್ಣಯ ಇದೆ. ನೈಸರ್ಗಿಕ ಸಂಪತ್ತಿನ ನಾಶವನ್ನು ತಪ್ಪಿಸಬೇಕಾದರೆ ಸಮಗ್ರ ಗ್ರ್ಯಾನೈಟ್ ಹಗಲು ದರೋಡೆಯನ್ನು ತಪ್ಪಿಸಬೇಕು. ಈ ಹಗಲು ದರೋಡೆಯನ್ನು ನಿಲ್ಲಿಸುವುದಕ್ಕೋಸ್ಕರವಾಗಿ ರಾಷ್ಟ್ರೀಕರಣ ಮಾಡಬೇಕಾಗುತ್ತದೆಂದು ಈ

ಸಭೆ ಇಂಥ ಒಂದು ತೀರ್ಮಾನ ಮಾಡಬೇಕಾಗುತ್ತದೆಂದು ನಿರ್ಣಯ ಇದೆ. ಈ ನಿರ್ಣಯ ಮುಂದೆ ಏನಾಗುತ್ತದೆ ಎಂಬುದು ಸಭೆಯ ನಿರ್ಣಯಕ್ಕೆ ಬಿಟ್ಟಿದ್ದು. ಈ ಸಭೆಯಲ್ಲಿ ಈ ನಿರ್ಣಯದ ಬಗ್ಗೆ ಸಮಗ್ರವಾಗಿ ಚಿಂತನೆ ನಡೆಯಬೇಕಾಗಿದೆ. ಚರ್ಚೆ ನಡೆಯಬೇಕಾಗಿದೆ. ಈ ದಿಸೆಯಲ್ಲಿ ಸರ್ಕಾರಕ್ಕೆ ನಾನು ಅನೇಕ ಸಲಹೆಗಳನ್ನು ಕೊಡಬೇಕಾಗಿದೆ. ಮತ್ತು ಅನೇಕ ಸದಸ್ಯರು ಚರ್ಚೆಯಲ್ಲಿ ಭಾಗವಹಿಸ ಬೇಕಾಗಿದೆ. ಇಷ್ಟೆಲ್ಲವೂ ವಸ್ತು ಸ್ಥಿತಿ ಇರುವಾಗ ಮತ್ತು ಈ ನಿರ್ಣಯ ಸಭೆಯ ಆಸ್ತಿ ಆಗಿರುವಾಗ ಈ ನಿರ್ಣಯದ ಗತಿ ಏನು ಎಂಬ ಬಗ್ಗೆ ತಾವು ತೀರ್ಪು ಕೊಡಬೇಕಾಗಿದೆ. ತಾವು ತೀರ್ಪು ಕೊಟ್ಟ ನಂತರ ಇದರ ಪರಿಸ್ಥಿತಿ ಏನು ಎಂದು ಹೇಳಬಹುದು. ಒಂದು ಕಡೆ ನಾವು ಸಭೆಯಲ್ಲಿ ನಿರ್ಣಯವನ್ನು ಇಟ್ಟುಕೊಂಡಿದ್ದೇವೆ. ಸಭೆಯ ಆಸ್ತಿಯಾಗಿ ನಿರ್ಣಯ ಇದೆ. ಮತ್ತೊಂದು ಕಡೆ ಮಾನ್ಯ ಸಚಿವರು ಸಚಿವ ಸಂಪುಟದಲ್ಲಿ ತರಾತುರಿಯಲ್ಲಿ ನಿರ್ಣಯ ಸಭೆಯ ಮುಂದಿದೆ ಎಂಬುದನ್ನು ಮರೆತು, ಖಾಸಗೀಯವರಿಗೆ ಇದರ ಗುತ್ತಿಗೆಯನ್ನು ಕೊಡತಕ್ಕ ನಿರ್ಣಯ ಆಗಿದೆ. ಇದು ಸಂಬಂಧಪಟ್ಟ ಸಚಿವರ ಗಮನಕ್ಕೂ ಬರಲಿಲ್ಲವೇ ?

ಶ್ರೀ ಕಾಗೋಡು ತಿಮ್ಮಪ್ಪ —ಶ್ರೀ ವಾಟಾಳ್ ನಾಗರಾಜ್ ಅವರು ಬಹಳ ಪ್ರಮುಖವಾದ ನಿರ್ಣಯವನ್ನು ಸಭೆಯ ಮುಂದೆ ಮಂಡಿಸಿದ್ದಾರೆ. ಅದರ ಮೇಲೆ ತುಂಬಾ ಉಪಯುಕ್ತವಾದ ಚರ್ಚೆ ಮಾಡುತ್ತಾರೆಂದು ನಾವು ಭಾವಿಸಿದ್ದೇವೆ. ಆದರೆ ಈಗ ಅವರು ಈ ಸದನಕ್ಕೆ ಸರ್ಕಾರದ ತೀರ್ಮಾನದಿಂದ ಹಕ್ಕುಚ್ಯುತಿಯಾಗಿದೆ ಎಂದು ಹೇಳುತ್ತಿದ್ದಾರೆ. ಹಕ್ಕುಚ್ಯುತಿಯಾಗಿದ್ದರೆ ಅದಕ್ಕೆ ಪ್ರತ್ಯೇಕ ಪ್ರಸ್ತಾವವನ್ನು ಕಳುಹಿಸಿ ಚರ್ಚೆ ಮಾಡುವುದಕ್ಕೆ ಸಂಪೂರ್ಣ ಅಧಿಕಾರ ಅವರಿಗೆ ಇದೆ. ಆ ಕೆಲಸವನ್ನು ಅವರು ಮಾಡಬೇಕು, ಒಂದು ವೇಳೆ ನಾಗರಾಜ್ ಅವರ ನಿರ್ಣಯವನ್ನು ಈ ಸಭೆ ಅಂಗೀಕಾರ ಮಾಡಿದರೆ ಸರ್ಕಾರ ಕೈಗೊಂಡಿರತಕ್ಕ ಎಲ್ಲಾ ನಿರ್ಣಯಗಳು ನಿರ್ಣಾಮವಾಗುತ್ತವೆ. ಆದುದರಿಂದ ದಯವಿಟ್ಟು ನೇರವಾಗಿ ನಿರ್ಣಯದ ಮೇಲೆ ಚರ್ಚೆ ಮಾಡಿ ಈ ಸದನದ ತೀರ್ಪಿಗೆ ಆ ನಿರ್ಣಯವನ್ನು ಒಳಪಡಿಸಿದರೆ ಏನು ತೀರ್ಮಾನವಾಗುತ್ತದೆಂದು ನೋಡಿ ಆ ಪರಿಣಾಮದಿಂದ ಸರ್ಕಾರ ಕೈಗೊಂಡಿರತಕ್ಕ ತೀರ್ಮಾನದ ಮೇಲೆ ಕ್ರಮ ಕೈಗೊಳ್ಳಬಹುದು. ಆದುದರಿಂದ ಮಾನ್ಯ ಸದಸ್ಯರು ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚೆಯನ್ನು ಆರಂಭಿಸಿದರೆ ನಾವು ಕೇಳಬಹುದೆಂದು ನಿಮ್ಮ ಮೂಲಕ ವಿನಂತಿಸಿ ಕೊಳ್ಳುತ್ತೇನೆ.

ಛೇರ್ಮನ್.—ವಿಷಯಕ್ಕೆ ಬನ್ನಿ. ತಾವು ವಿಷಯವನ್ನು ಇನ್ನೂ ಪ್ರಾರಂಭ ಮಾಡಿಲ್ಲ, ಇನ್ನೂ ಪೀಠಿಕೆಯಲ್ಲಿದ್ದೀರಿ.

ಶ್ರೀ ಬಿ. ಶಿವಣ್ಣ.—ಮಾನ್ಯ ಸದಸ್ಯರು ಮಂತ್ರಿಗಳ ಮೇಲೆ. ಕ್ಯಾಬಿನೆಟ್ ಮೇಲೆ ಆಪಾದನೆ ಮಾಡುತ್ತಿದ್ದರು. ಈ ಸಮಸ್ಯೆ ೧೯೮೭ರಿಂದ ಅಂದರೆ ಕಳೆದ ೩ ವರ್ಷಗಳಿಂದ ನಡೆದುಕೊಂಡು ಬಂದಿದೆ : ಇದಕ್ಕೆ ನಾವಾಗಲಿ ನಮ್ಮ ಸರ್ಕಾರವಾಗಲಿ ಹೊಣೆ ಅಲ್ಲ. ಕೇಂದ್ರ ಸರ್ಕಾರ ಇನ್‌ಸಿಸ್ಟ್ ಮಾಡಿದೆ, ನಾವು ಇಂಪ್ಲಿಮೆಂಟ್ ಮಾಡಿದ್ದೇವೆ. ಹಕ್ಕುಚ್ಯುತಿ ಪಾಸ್ ಮಾಡುವುದಕ್ಕೆ ಚರ್ಚೆ ಮಾಡಬೇಕಲ್ಲ.

ಶ್ರೀ ವಾಟಾಳ್ ನಾಗರಾಜ್.—ಕಾಗೋಡು ತಿಮ್ಮಪ್ಪನವರು ಹೇಳಿದರು ವಿಷಯಕ್ಕೆ ಬನ್ನಿ ಎಂದು. ನಾನು ವಿಷಯಕ್ಕೆ ಬರುತ್ತಿರುವುದು. ವಿಷಯವನ್ನು ತಪ್ಪಿ ಏನೂ ಮಾಡುತ್ತಿಲ್ಲ. ಇಲ್ಲಿ ನಿರ್ಣಯವಾದ ಮೇಲೆ ಸರ್ಕಾರ ಮಾಡಿದ್ದೆಲ್ಲ ರದ್ದಾಗುತ್ತದೆಂದು ಹೇಳಿದರು, ಅದು ನನಗೂ ಗೊತ್ತು ಈಗಾಗಲೇ ಸರ್ಕಾರ ಸರ್ಕಾರೀ ಪತ್ರದಲ್ಲಿ ಏನೇನು ಮಾಡಬೇಕೆಂಬ ನಿಯಮಗಳನ್ನು ಮುದ್ರಿಸಿ ಕಳುಹಿಸಿದ್ದಾರೆ. ಯಾರ್ಯಾರು ಕಲ್ಲನ್ನು ತೆಗೆದು ವಿದೇಶಕ್ಕೆ ಮಾರುವ ಮೂಲಕ ಲಗ್ಗೆ ಹಾಕಿದ್ದಾರೆ ಯಾವ ದೊಡ್ಡ ಗುಂಪು ಲಗ್ಗೆ ಹಾಕಿದೆ ಎಂಬುದು ಸಚಿವರಿಗೆ ಗೊತ್ತಿದೆ : ಭೂವಿಜ್ಞಾನ ಇಲಾಖೆಗೆ ಗೊತ್ತಿದೆ. ಯಾರ್ಯಾರಿಗೆ ಕೊಡಿಸಬೇಕು, ಯಾರ್ಯಾರನ್ನು ಉಳಿಸಬೇಕು, ಬೆಳಸಬೇಕು ಎಂದು ನಡೆಯುತ್ತಿದೆ.

ಶ್ರೀ ಬಿ. ಶಿವಣ್ಣ.—ಅದು ರೂಲ್‌ನಲ್ಲಿ ಇಲ್ಲವೆ ಬಂದನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್,—ರೂಲ್ಸ್‌ನಲ್ಲಿ ಇಲ್ಲವೆಂದು ಅರ್ಥ ಮಾಡಿಕೊಂಡಿದ್ದೇನೆ. ರೂಲ್ಸ್‌ನಲ್ಲಿ ಇಲ್ಲದಿರುವುದನ್ನೇ ನೀವು ಮಾಡುತ್ತಿರುವುದು. ಇವ್ಯಾವು ರೂಲ್ಸ್‌ನಲ್ಲಿ ಇಲ್ಲ ನೀವು ರೂಲ್ಸ್ ಪ್ರಕಾರ ಮಾಡುತ್ತಿಲ್ಲ. ರೂಲ್ಸ್ ಬಿಟೇ ಮಾಡುತ್ತಿರುವುದು. ಅದರ ಬಗ್ಗೆಯೇ ನಾನು ಹೇಳುತ್ತಿದ್ದೇನೆ. ಈ ಒಂದು ನಿರ್ಣಯದ ಗತಿ ಏನು ಎಂದು ತೀರ್ಮಾನವಾಗಬೇಕು, ಮಾನ್ಯ

ತಿಮ್ಮಪ್ಪನವರು ಹೇಳುತ್ತಾರೆ, ಕೆರೆಯ ತೂಬು ಒಡೆದಮೇಲೆ ಆ ನೀರು ಭೂಮಿ ಕುಡಿದ ಮೇಲೆ ಆ ನೀರನ್ನು ತಂದು ಸೇರಿಸುತ್ತೇನೆಂದು ದೊಡ್ಡ ಮ್ಯಾಜಿಕ್ ಮಾಡುತ್ತಿದ್ದಾರೆ. ಅವರ ತಲೆಯಲ್ಲಿ ಏನೋ ಇರಬಹುದು. ಆದರೆ ನನಗೆ ಆ ನಂಬಿಕೆ ಹೋಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಅದಕ್ಕೇ ಹೇಳುತ್ತಿದ್ದೇನೆ, ಮೊದಲು ನಿರ್ಣಯವನ್ನು ಮಂಡಿಸಿ ಎಂದು,

ಶ್ರೀ ವಾಟಾಳ್ ನಾಗರಾಜ್.—ನಿರ್ಣಯವನ್ನು ಮಂಡಿಸುವುದಕ್ಕೆ ಮುಂಚೆ ತಾವು ಏನೇನು ಮಾಡುತ್ತಿದ್ದೀರಿ ನಿಮ್ಮ ಸರ್ಕಾರ ಏನೇನು ಮಾಡುತ್ತಿದೆ ಎಂದು ಹೇಳಬೇಕಲ್ಲ ಅವರ ಬಗ್ಗೆ ಎಲ್ಲಾ ಹೇಳಬೇಕಾಗಿರುವುದರಿಂದ ವಿಚಾರವನ್ನು ಹೇಳುತ್ತಿದ್ದೇನೆ. ಆದ್ದರಿಂದ ಈ ವಿಚಾರದಲ್ಲಿ ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ. ತಾವು ಗುರುತರವಾಗಿ ಇದನ್ನು ಗಮನಿಸಬೇಕು. ಸುಮ್ಮನೆ ಇದರ ಬಗ್ಗೆ ಏನೋ ವೃಥಾ ಮಾತನಾಡುತ್ತೇನೆ ಎಂದು ಭಾವಿಸಬಾರದು ಮಾನ್ಯ ಸಚಿವರು ಇಲ್ಲಿ ಕುಳಿತಿದ್ದಾರೆ. ತಾವೂ ಕುಳಿತಿದ್ದೀರಿ ಈ ಸಭೆಯ ಘನತೆಯನ್ನು, ಸಾರ್ವಭೌಮತ್ವವನ್ನು ಎತ್ತಿ ಹಿಡಿಯತಕ್ಕದ್ದು ತಮಗೆ ಸೇರಿದ್ದುದು. ಈ ನಿರ್ಣಯದಲ್ಲಿ ಏನಿದೆ ? ಒಂದು ಕಡೆ ಸರ್ಕಾರ ಏನು ಬೇಕಾದರೂ ಮಾಡಬಹುದು, ನಿರ್ಣಯ ಒಳಗಡೆ ಇರಲಿ ಎಂಬ ನಿರ್ಧಾರವಾದರೆ ನಮ್ಮ ಅಭ್ಯಂತರ ಇಲ್ಲ. ಆಗ ನಮ್ಮ ನಿರ್ಣಯದ ಗತಿ ಏನು ? ಇದು ಬದುಕಿದೆಯೋ, ಸತ್ತಿದೆಯೋ, ಜೀವ ಇದೆಯೋ ಎಂಬುದು ಪ್ರಶ್ನೆ. ನನ್ನ ದೃಷ್ಟಿಯಲ್ಲಿ ಈ ವಿಚಾರದಲ್ಲಿ ಬೆಳಕನ್ನು ಚೆಲ್ಲಬೇಕಾಗುತ್ತದೆ. ರಾಜ್ಯಕ್ಕೆ, ಸರ್ಕಾರಕ್ಕೆ ಬೆಳಕನ್ನು ಚೆಲ್ಲಬೇಕಾಗುತ್ತದೆ. ಬೆಳಕು ಚೆಲ್ಲಿ ಅಂತಿಮವಾಗಿ ನನಗೆ ಏನು ಉತ್ತರ ಸಿಗುತ್ತದೆ, ಏನು ನ್ಯಾಯ ಸಿಗುತ್ತದೆ ಎಂಬುದು ಬೇಕು. ಇದೆಲ್ಲಾ ಬರುತ್ತದೆ ಎಂದಾಗ ಈ ನಿರ್ಣಯದ ಪರಿಸ್ಥಿತಿ ಏನು...

ಶ್ರೀ ಕಾಗೋಡು ತಿಮ್ಮಪ್ಪ.—ಈ ನಿರ್ಣಯವನ್ನು ಮಂಡಿಸಿದಂತಹ ಮಾನ್ಯ ಸದಸ್ಯರೇ ಅದರ ಅಸ್ತಿತ್ವದ ಬಗ್ಗೆ ಅನುಮಾನ ವ್ಯಕ್ತಪಡಿಸಿದರೆ ಈ ಸದನ ಏನು ಮಾಡಬಹುದು ವಿಚಾರ ಮಾಡಿ. ನಿರ್ಣಯವನ್ನು ಸಭೆಯ ಮುಂದೆ ಮಂಡಿಸಿದ್ದೀರಿ, ಅದು ಈ ಸಭೆಯ ವಸ್ತುವಾಗಿದೆ. ಅದರ ಮೇಲೆ ಚರ್ಚೆ ಮಾಡಿದರೆ ಸಭೆ ತೀರ್ಮಾನ ಮಾಡುವುದಕ್ಕೆ ಸಹಾಯವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ನಾನೇ ಹೇಳುವುದಿಷ್ಟೆ. ನಾನು ತಂದಿರತಕ್ಕ ನಿರ್ಣಯ ಸಭೆಯ ಮುಂದೆ ಬಂದಿರುವುದು ಸುದೈವ ನಾನು ನಿರ್ಣಯ ಬಿಟ್ಟು ಬೇರೆ ವಿಷಯಕ್ಕೆ ಹೋಗಿಲ್ಲ. ಈ ನಿರ್ಣಯ ತರುವುದಕ್ಕೆ ಇದರ ಹಿಂದೆ ಎಷ್ಟು ಹೋರಾಟ ಮಾಡಿದ್ದೇನೆ ಎಂಬುದು ತಮಗೆ ಗೊತ್ತಿದೆ, ಪ್ರತಿನಿತ್ಯ ಪತ್ರಿಕೆಯಲ್ಲಿ ಓದಿದ್ದೀರಿ. ಶಾಸನಸಭೆಗೆ ಬರುವುದಕ್ಕೆ ಮುಂಚೆ ಮೂರು ನಾಲ್ಕು ವರ್ಷಗಳಿಂದ ಹೋರಾಟ ಮಾಡಿರುವುದು ಕಾಗೋಡು ತಿಮ್ಮಪ್ಪನವರಿಗೆ ಗೊತ್ತಿದೆ. ಹೆಜ್ಜೆಹೆಜ್ಜೆಗೂ ಹೋರಾಟ ಮಾಡಿದ್ದೇನೆ. ಇದೊಂದು ಅತ್ಯಂತ ಪ್ರಮುಖವಾದ ವಿಚಾರ, ರಾಜ್ಯದ ಒಂದು ನಿಸರ್ಗ ಸಂಪತ್ತನ್ನು ಕರ್ನಾಟಕ ರಾಜ್ಯ ಯಾವ ಸೌಂದರ್ಯ, ವೈಭವ ಇತಿಹಾಸ, ದೊಡ್ಡ ಪರಂಪರೆ ಕಂಡು ಹೇಳುತ್ತಿದ್ದೇನೆ. ಅರಣ್ಯ ಯಾವರೀತಿ ಇತ್ತು ? ಎಲ್ಲಿಂದ ಎಲ್ಲಿಗೆ ಹೋದರೂ ಸೌಂದರ್ಯ ಕಾಣುತ್ತಿತ್ತು, ಅದೆಲ್ಲವನ್ನೂ ನಾಶ ಮಾಡುವುದಕ್ಕೆ ಹೊರಟಿದ್ದಾರೆ. ಈ ಗ್ರಾನೈಟ್ ಕಲ್ಲಿನ ಲೂಟಿ ನಿರಂತರವಾಗಿ ಆಗುತ್ತಿದೆ. ಅದನ್ನು ತಪ್ಪಿಸಬೇಕು ಎಂದು ಸಮಗ್ರವಾಗಿ ಚರ್ಚೆ ಮಾಡಬೇಕೆಂದು ಮೊದಲಿಂದ ಹೋರಾಟ ಮಾಡಿದ್ದೇನೆ. ಸುದೈವ, ಶಾಸನಸಭೆಗೆ ಬಂದು ಈ ನಿರ್ಣಯವನ್ನು ನಾನೇ ಮಂಡಿಸತಕ್ಕ ಅವಕಾಶ ದೊರೆಯಿತು. ನನಗೆ ಅವಕಾಶ ಕೊಟ್ಟಿರುವುದಕ್ಕೆ ಧನ್ಯ. ಈ ಮಾನ್ಯ ಸಭೆಗೆ ಅಧ್ಯಕ್ಷರ ಮೂಲಕ ಹೇಳುವುದೇನೆಂದರೆ ಈ ನಿರ್ಣಯದ ಬಗ್ಗೆ ಸರಿಯಾದ ತೀರ್ಪು ಕೊಡಬೇಕೆಂದು ನನ್ನ ಅನಿಸಿಕೆ. ಮತ್ತು ಒತ್ತಾಯ. ನಾನು ಈ ಬಗ್ಗೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿದ್ದೇನೆ. ಇದರ ಬಗ್ಗೆ ಚರ್ಚೆ ಮಾಡಿ ಸಭೆಯ ಗಮನಕ್ಕೆ ತರುತ್ತೇನೆ. ನಾನು ಸಚಿವರಿಗೆ ಹೇಳುತ್ತಿದ್ದೇನೆ ಈಗಾಗಲೇ ಒಂದು ಕೈ ಮುಂದೆ ಹೋಗಿದ್ದೀರಿ. ನಿರ್ಣಯ ಮೂಲೆಗೆ ಹಾಕಿದ್ದೀರಿ. ಕೈಗೆ ತೆಗೆದುಕೊಂಡಿಲ್ಲ.

ಶ್ರೀ ಬಿ. ಶಿವಣ್ಣ (ಗಣಿ ಮತ್ತು ಭೂವಿಜ್ಞಾನ ಸಚಿವರು).—೧-೮-೧೯೮೭ರಲ್ಲಿ ಲಿಬರಲೈಸೇಷನ್ ಆಫ್. ಗ್ರಾನೈಟ್ ಪಾಲಿಸಿ ಕನ್‌ಸಿಡರ್ ಮಾಡಬೇಕೆಂದು ಡಿಸಿಷನ್ ತೆಗೆದುಕೊಂಡು ಇಂಪ್ಲಿಮೆಂಟ್ ಮಾಡುತ್ತಿದ್ದೇವೆ. ಇದು ತಮಗಾಗಲೀ ಹೌಸ್‌ಗಾಗಲೀ ಡಿಸ್‌ರೆಸ್ಪೆಕ್ಟ್ ಮಾಡಿದಂತಾಗುವುದಿಲ್ಲ

ಶ್ರೀ ವಾಟಾಳ್ ನಾಗರಾಜ್.—ಏನು ನಿರ್ಣಯ ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ಶಿವಣ್ಣ.—ಲಿಬರಲೈಸೇಷನ್ ಮಾಡಬೇಕೆಂದು ತೆಗೆದುಕೊಂಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್.—ಅರಸು ಅವರ ಕಾಲದಲ್ಲಿ ರಾಷ್ಟ್ರೀಕರಣ ಇತ್ತು. ಈಗ ಅದನ್ನು ತಪ್ಪಿಸಿ ಕೊಟ್ಟಿರುವುದರ ಗುಟ್ಟೇನು ?

೧೨-೧೫ ಪಿ ಎಂ.

ಶ್ರೀ ಬಿ. ಶಿವಣ್ಣ.—೧೯೭೫ರಲ್ಲಿ ಸರ್ಕಾರ ಗ್ರಾನೈಟನ್ನು ಬ್ಯಾನ್ ಮಾಡಿದ್ದು ಪ್ರವೇಟ್ ಜನರಿಗೆ ಕೊಡಬಾರದೆಂದು. ೧೯೭೧-೭೨ರಲ್ಲಿ ಮತ್ತೊಂದು ಸಾರಿ ಗ್ರೈನೇಟ್......

ಶ್ರೀ ವಾಟಾಳ್ ನಾಗರಾಜ್.—೧೯೭೧-೭೨ಕ್ಕೆ ಹೋಗಬೇಡಿ, ೧೯೭೫ಕ್ಕೆ ಬನ್ನಿ.

ಶ್ರೀ ಬಿ. ಶಿವಣ್ಣ.—ಗ್ರಾನೈಟ್ ಬ್ಲಾಕ್ ಅನ್ನು ಬ್ಯಾನ್ ಮಾಡಿದರು. ೧೯೮೧-೮೨ರಲ್ಲಿ ಉಳಿದಂತಹ ಕಲರ್ಸ್, ಬ್ಯಾನ್ ಮಾಡಿದರು ನಂತರ ದೇಶಕ್ಕೆ ಫಾರಿನ್ ಎಕ್ಸ್‌ಚೇಂಜ್ ಬೇಕು ಎಂದು ನಾನಾ ದೇಶಗಳಿಗೆ ಕಲ್ಲನ್ನು ಕಳುಹಿಸಬೇಕು ಅದರಿಂದ ನಮಗೆ ಫಾರಿನ್ ಎಕ್ಸ್‌ಚೇಂಜ್ ಬರುತ್ತದೆಂದು ಹೇಳಿದರು. ಮಾನ್ಯ ಸದಸ್ಯರು ನಾನು ಹೇಳುವುದನ್ನು ಸ್ವಲ್ಪ ಕೇಳಿ. ೧೯೮೧-೮೨ರ ತನಕ ಬ್ಯಾನ್ ಆಯಿತು. ಆ ಮೇಲೆ ಅದಕ್ಕೆ ಡಿಮ್ಯಾಂಡ್ ಬಂತು. ಕೇಂದ್ರ ಸರ್ಕಾರ ಗ್ರಾನೈಟನ್ನು ಎಕ್ಸ್‌ಪ್ಲಾಯಿಂಟ್ ಮಾಡಬೇಕೆಂದು ಇನ್ಸಿಸ್ಟ್ ಮಾಡಿದರು. ಅದನ್ನು ಹೊರದೇಶಗಳಿಗೆ ಕಳುಹಿಸುವುದರಿಂದ ನಮಗೆ ಫಾರಿನ್ ಎಕ್ಸ್‌ಚೇಂಜ್ ಬರುತ್ತದೆ ಗ್ರಾನೈಟನ್ನು ಲಿಬರಲೈಸ್ ಪಾಲಿಸಿ ತಂದು. ಖಾಸಗಿಯವರು ಇದರಲ್ಲಿ ಭಾಗವಹಿಸಲು ಅವಕಾಶ ಕೊಡಬೇಕೆಂದು ಮಾಡಿದರು. This is what Government of India told to us.

ಶ್ರೀ ವಾಟಾಳ್ ನಾಗರಾಜ್.—ಕೇಂದ್ರ ಸರ್ಕಾರದ ಆಜ್ಞೆ ಏನಿದೆ ಅದನ್ನು ದಯವಿಟ್ಟು ಸಭೆಯ ಮುಂದೆ ಓದಿ. ಕೇಂದ್ರ ಸರ್ಕಾರ ಏನು ಹೇಳಿದೆ ಎಂಬುದನ್ನು ಹೇಳಿ. ದಯವಿಟ್ಟು ಸಭೆಯನ್ನು ತಪ್ಪು ದಾರಿಗೆ ಎಳೆಯಬೇಡಿ.

ಶ್ರೀ ಬಿ. ಶಿವಣ್ಣ.—೧೧ನೇ ತಾರೀಖು ಇದರ ಡಿಮ್ಯಾಂಡ್ ಬರುತ್ತದೆ ಆಗ ತಾವು ಮಾತನಾಡಿ.

ಛೇರ್ಮನ್.—ಮಾನ್ಯ ಸದಸ್ಯರು ತಾವು ನಿರ್ಣಯವನ್ನು ಮಂಡಿಸಿದ್ದೀರಿ ಅದರ ಸಾಧಕ ಬಾಧಕಗಳೇನು ನಿಮ್ಮ ಅಭಿಪ್ರಾಯಗಳನ್ನು ತಿಳಿಸಿ ಆನಂತರ ಸಂಬಂಧಪಟ್ಟ ಸಚಿವರು ಉತ್ತರ ಕೊಡುತ್ತಾರೆ. ತಾವು ಹೇಳುವುದನ್ನೆಲ್ಲ ಹೇಳಿ, ಅದಕ್ಕೆ ಮಂತ್ರಿಗಳು ಜವಾಬು ಕೊಡುತ್ತಾರೆ. ಮಾನ್ಯ ಸದಸ್ಯರು ಬೇಗ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್.—ಬೇಗ ಮುಗಿಸುವುದಕ್ಕೆ ಇದರ ಚರಿತ್ರೆ ಬಹಳ ಇದೆ.

ಛೇರ್ಮನ್.—ನೀವು ಹೇಳುವ ವಿಷಯವನ್ನು ವಿವರಣೆ ಕೊಟ್ಟು ಹೇಳಿ.

ಶ್ರೀ ವಾಟಾಳ್ ನಾಗರಾಜ್.—ಪಾಪ ತಾವು ಅಲ್ಲಿ ಕುಳಿತುಕೊಂಡಿದ್ದೀರಿ, ತಾವು ಅಲ್ಲಿ ಕುಳಿತು ಕೊಂಡಿರುವುದರಿಂದ ನಮಗೆ ಸ್ಫೂರ್ತಿ ಬರುತ್ತಿದೆ. ತಾವು ನಮಗೆ ಅಧ್ಯಕ್ಷರಾಗಿ ಬಂದಿರುವುದು ನಮಗೆ ಸ್ಫೂರ್ತಿ ಬರುತ್ತಾ ಇದೆ ತಮ್ಮ ಜಿಲ್ಲೆಯಲ್ಲೂ ಕಲ್ಲುಗಳು ಹೋಗಿದೆ. ಅದು ತಮಗೆ ಜ್ಞಾಪಕ ಇರಬೇಕೆಂದು ಕಾಣುತ್ತದೆ.

ಶ್ರೀ ಜಿ. ಮಾಧುಸ್ವಾಮಿ.—ಮಾನ್ಯ ಸದಸ್ಯರು ಮಾತನಾಡುವ ಆರಂಭದಲ್ಲಿ ಬಹುಶಃ ಇದು ಹಕ್ಕುಚ್ಯುತಿಯಾಗುತ್ತದೆಂದು ಹೇಳಿದರು. ಹಕ್ಕುಚ್ಯುತಿಯಾಗುತ್ತದೆಂದರೆ ಇದನ್ನು ಮಂಡನೆ ಮಾಡಬೇಕೇ ಬಿಡಬೇಕೇ ಎನ್ನುವುದು ಬರುತ್ತದೆ. ನಾವು ಇಲ್ಲಿ ಕುಳಿತುಕೊಂಡಿರುವವರು ಹೊಸ ಸದಸ್ಯರಿದ್ದೇವೆ. ಇದು ಹಕ್ಕುಚ್ಯುತಿಯಾದರೆ ಇದು ಚರ್ಚೆಯಾಗಬೇಕೇ ಬಿಡಬೇಕೇ ಎನ್ನುವುದು ಮೊದಲನೆಯ ಪ್ರಶ್ನೆ ಅದನ್ನು ಸಭೆಗೆ ಹೇಳಬೇಕಾಗುತ್ತದೆ. ಅದು ರೆಕಾರ್ಡ್‌ಗೆ ಹೋಗಿದೆ. ಹಕ್ಕುಚ್ಯುತಿಯಾಗಿದೆಯೆಂದು ಹೇಳಿ, ಸಭೆಯ ಮುಂದೆ ನಿರ್ಣಯ ಮಂಡಿಸುವುದಕ್ಕೆ ಸಾಧ್ಯವೇ ಎನ್ನುವುದನ್ನು ತಾವು ಹೇಳಬೇಕು.

ಛೇರ್ಮನ್.—ಮಾನ್ಯ ಸದಸ್ಯರು ಇನ್ನು ನಿರ್ಣಯದ ಮಂಡನೆಯ ಹಂತದಲ್ಲಿದ್ದಾರೆ.

ಶ್ರೀ ಜಿ. ಮಾಧುಸ್ವಾಮಿ.—ಅವರು ಕ್ಲಿಯರ್ ಆಗಿ ಹಕ್ಕುಚ್ಯುತಿಯಾಗಿದೆಯೆಂದು ಹೇಳಿದ್ದಾರೆ.

ಛೇರ್ಮನ್.—ಹಕ್ಕುಚ್ಯುತಿ ನಿರ್ಣಯ ಮಂಡನೆ ಮಾಡಲಿಕ್ಕೆ ಬೇರೆ ನಿಯಮಗಳು ಇವೆ. ಆ ನಿಯಮಾವಳಿ ಪ್ರಕಾರ ಮಂಡನೆ ಮಾಡಬೇಕು. ಈ ಮನೆಯನ್ನು ಅದನ್ನು ಬಿಟ್ಟು ಖಾಸಗೀ ನಿರ್ಣಯವನ್ನು ಹಕ್ಕುಚ್ಯುತಿ ನಿರ್ಣಯವೆಂದು ಪರಿಗಣಿಸುವುದಕ್ಕೆ ಆಗುವುದಿಲ್ಲ.

ಶ್ರೀ ಜಿ. ಮಾಧುಸ್ವಾಮಿ.—ಅದನ್ನು ಹೇಳಿದರೆ ನಾವು ಕುಳಿತುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್.—ಹಕ್ಕುಚ್ಯುತಿ ಆಗುವುದಿಲ್ಲವೆಂದು ತಾವು ಹೇಳಿದಿರಾ ?

ಛೇರ್ಮನ್.—ಆಗುವುದಿಲ್ಲವೆಂದು ಹೇಳಲಿಲ್ಲ, ತಾವು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ಅದಕ್ಕೆ ಸರ್ಕಾರದ ಉತ್ತರ ಏನು ಬರುತ್ತದೆ ನೋಡಿಕೊಂಡು ಆಮೇಲೆ ತೀರ್ಮಾನವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಖಾಸಗೀ ನಿರ್ಣಯ ಹಕ್ಕುಚ್ಯುತಿ ಆಗುವುದಿಲ್ಲವೆ ?

ಛೇರ್ಮನ್.—ಖಾಸಗೀ ನಿರ್ಣಯ ಹಕ್ಕುಚ್ಯುತಿಯಾಗುವುದಿಲ್ಲವೆಂದು ಹೇಳಿದ್ದೇನೆ. ತಾವು ಇನ್ನು ವಿವರಣೆಯ ಹಂತದಲ್ಲಿದ್ದೀರಿ. ನಿಮ್ಮ ವಾದ ಏನಿದೆ ಅದನ್ನು ಸರ್ಕಾರದ ಮುಂದಿಡಬೇಕು. ಸರ್ಕಾರದ ಸಮಜಾಯಿಸಿಯನ್ನು ಕೇಳಬೇಕು. ಸಚಿವರು ಮಾತನಾಡುತ್ತಿದ್ದಾರೆ ನೀವು ಮಾತನಾಡುತ್ತಿದ್ದೀರಿ, ಅದು ಏನೊಂದು ತೀರ್ಮಾನ ಮಾಡುವುದಕ್ಕೆ ಆಗುತ್ತಿಲ್ಲ ನೀವು ನಿರ್ಣಯಕ್ಕೆ ಪೂರ್ಣ ವಿವರಣೆ ಕೊಟ್ಟ ನಂತರ ಸರ್ಕಾರ ಏನು ಹೇಳುತ್ತದೆ ನೋಡಿಕೊಂಡು ಆಮೇಲೆ ತೀರ್ಮಾನ ಹೇಳೋಣ. ಮಾನ್ಯ ಸದಸ್ಯರಾದ ನಾಗರಾಜ್‌ರವರು ಹಕ್ಕುಚ್ಯುತಿಯ ಬಗ್ಗೆ ಮಾತ್ರ ಮಾತನಾಡುತ್ತಿದ್ದಾರೋ ಅಥವಾ ನಿರ್ಣಯದ ಬಗ್ಗೆ ಮಾತನಾಡುತ್ತಿದ್ದೀರೋ ?

ಶ್ರೀ ವಾಟಾಳ್ ನಾಗರಾಜ್.—ಹಕ್ಕುಚ್ಯುತಿ ಮತ್ತು ನಿರ್ಣಯ ಎರಡರ ಬಗ್ಗೆ ಮಾತನಾಡುತ್ತಿದ್ದೇನೆ. ಹಕ್ಕುಚ್ಯುತಿಯಾಗಿದೆ ಎಂದು ಹೇಳಲಿಲ್ಲ ಅಂದರೆ ಸರ್ಕಾರ ದರೋಡೆ ಮಾಡುವುದಕ್ಕೆ ಅವಕಾಶ ಕೊಟ್ಟಿದೆಯೆಂದು ಹೇಳಬೇಕಾಗುತ್ತದೆ.

ಛೇರ್ಮನ್.—ಸರ್ಕಾರ ಉತ್ತರ ಕೊಟ್ಟ ನಂತರ ಸರ್ಕಾರದ ನಿಲುವು ಏನಿದೆ ಎನ್ನುವುದು ನಿಮ್ಮ ಗಮನಕ್ಕೆ ಬಾರದೆ ನಿಮ್ಮ ಅಭಿಪ್ರಾಯ ಹೇಳುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್.—ಹಕ್ಕುಚ್ಯುತಿಯಾಗಿದೆಯೆಂದು ನಾನು ಹೇಳುತ್ತಿದ್ದೇನೆ. ಅದರ ಬಗ್ಗೆ ತಾವು ಸಮಗ್ರವಾದ ತೀರ್ಪನ್ನು ಈ ಸಭೆಯಲ್ಲಿ ಕೊಡಬೇಕು.

ಛೇರ್ಮನ್.—ತಾವು ತಮ್ಮ ಭಾಷಣ ಪೂರ್ಣ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಹಕ್ಕುಚ್ಯುತಿಯ ಪ್ರಸ್ತಾವವನ್ನು ಕಳುಹಿಸದೆ ಈಗ ತಾವು ನಿರ್ಣಯ ಕೊಡಬಹುದೇ ? ಪ್ರಸ್ತಾವ ನಿಮ್ಮ ಮುಂದಿಲ್ಲದೆ ಇದ್ದಾಗ ತಾವು ನಿರ್ಣಯ ಕೊಡಬೇಕಾದ ಸಂದರ್ಭ ಉದ್ಭವಿಸುವುದಿಲ, ಆದ್ದರಿಂದ ಹಕ್ಕುಚ್ಯುತಿಯ ನಿರ್ಣಯ ಮಂಡಿಸುವ ಅವಶ್ಯಕತೆ ಇದ್ದರೆ ಮಾನ್ಯ ನಾಗರಾಜ್‌ರವರು ಯಾವಾಗ ಬೇಕಾದರೂ ಮಂಡಿಸಬಹುದು. ಮೊದಲು ಪ್ರಸ್ತಾವವನ್ನು ಕಳುಹಿಸಬೇಕು. ನಿರ್ಣಯದ ಬಗ್ಗೆ ಚರ್ಚೆ ಮಾಡಲಿ. ಅವರು ಆ ಬಗ್ಗೆ ಹೋರಾಟ ಮಾಡಿದ್ದಾರೆ, ಆ ಬಗ್ಗೆ ಸಮಗ್ರವಾಗಿ ತಿಳಿದುಕೊಂಡಿದ್ದಾರೆ ಚರ್ಚೆಯನ್ನು ಗಂಭೀರವಾಗಿ ಪ್ರಸ್ತಾಪ ಮಾಡಿದರೆ ನಿಜವಾಗಿಯೂ ಈ ಸಭೆಗೆ ಸಹಾಯ ಮಾಡಿದಂತಾಗುತ್ತದೆ. ಆದ್ದರಿಂದ ನಿಮ್ಮನ್ನು ಕೇಳುತ್ತಿದ್ದೇನೆ, ತಾವು ಹೋರಾಟ ಮಾಡಿದ್ದೀರಿ ಅದು ನನಗೆ ಗೊತ್ತಿದೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ನಿಮ್ಮ ಬಗ್ಗೆ ನಮಗೆ ಗೌರವವಿದೆ ಈ ಸದನದಲ್ಲಿ ಬೇರೆಯವರು ಬೆಳಕನ್ನು ಚೆಲ್ಲಿ ನಿಮ್ಮ ವಾದವನ್ನು ಸಮರ್ಥನೆ ಮಾಡತಕ್ಕ ಅವಕಾಶ ಸಿಕ್ಕಿದರೆ ಅವನ್ನು ಏತಕ್ಕೆ ಕಳೆದುಕೊಳ್ಳುತ್ತೀರೋ ನನಗೆ ಅರ್ಥವಾಗುತ್ತಿಲ್ಲ.

ಛೇರ್ಮನ್.—ವಾಟಾಳ್ ನಾಗರಾಜ್ ಅವರೇ, ನೀವು ಪ್ರತ್ಯೇಕವಾದ ನಿರ್ಣಯವನ್ನು ನಿಮ್ಮ ಅಭಿಪ್ರಾಯದ ಬಗ್ಗೆ ಹೌಸ್ ಮುಂದೆ ತರಬಹುದು. ಈಗ ವಿಷಯಕ್ಕೆ ಸೀಮಿತ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್. ನಿಮ್ಮ ಮತ್ತು ಕಾಗೋಡು ತಿಮ್ಮಪ್ಪನವರ ಹೊಡೆತ ತಡೆದುಕೊಳ್ಳುವುದಕ್ಕೆ ನನಗಾಗುತ್ತಿಲ್ಲ. ನೀವು ಹೇಳುವುದನ್ನು ನೋಡಿದರೆ ನನಗೆ ಭೀತಿ ಬರುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಒಬ್ಬ ಮನುಷ್ಯ ಒಂದು ತತ್ವಕ್ಕೋಸ್ಕರವಾಗಿ ಹೋರಾಟ ಮಾಡಿದ ಮನುಷ್ಯ ಶಾಸನಸಭಾ ಸದಸ್ಯರಾಗಿ ನಿರ್ಣಯವನ್ನು ಮಂಡಿಸಿರಬೇಕಾದರೆ ಅತ್ಯಂತ ಗಂಭೀರವಾದ ವಿಷಯಗಳು ಪ್ರಸ್ತಾಪವಾಗುತ್ತವೆ ಎಂಬ ಕುತೂಹಲದಿಂದ ಹೊರಗಡೆ ಹೋಗದೆ ಕಾದು ಕುಳಿತಿದ್ದೇನೆ. ಆದ್ದರಿಂದ ವಿಷಯ ಪ್ರಸ್ತಾಪ ಮಾಡಿದರೆ ಚರ್ಚೆಯಲ್ಲಿ ಹೆಚ್ಚು ಭಾಗವಹಿಸಬಹುದು ಎಂಬ ಭಾವನೆಯಿಂದ ಹೇಳಿದೆ ಅಷ್ಟೆ.

ಶ್ರೀ ಬಿ. ಎಂ. ಇದಿನಬ್ಬ.—ಶ್ರೀಯುತ ವಾಟಾಳ್ ನಾಗರಾಜರ ವಿಷಯ ಅತ್ಯಂತ ಮಹತ್ವಪೂರಿತವಾದುದು. ನಾವೂ ಸಹ ಆಲೋಚನೆ ಮಾಡುತ್ತಿದ್ದೇವೆ ಕಾಗೋಡು ತಿಮ್ಮಪ್ಪನವರು ಹೇಳಿದಹಾಗೆ ಈ ಬಗ್ಗೆ ನಾವೂ ಮಾತನಾಡಬೇಕೆನಿಸುತ್ತದೆ. ಅವರು ಯಾವ ನಿರ್ಣಯ ಮಂಡಿಸಿ ಪ್ರಸ್ತಾಪ ಮಾಡಿದಾರೆ ಅದರ ಬಗ್ಗೆ ವಾದ ಒಂದು ದಿವಸದಲ್ಲಿ ಮುಗಿಯುವುದಿಲ್ಲ ಅನ್ನಿಸುತ್ತದೆ ಈ

ರೀತಿ ಹೋದರೆ. ಹೀಗಾದರೆ ಮೂಲಭೂತವಾಗಿ ನಿರ್ಣಯದ ಶಕ್ತಿ, ಸತ್ವ ಕಡಿಮೆಯಾಗುತ್ತದೆ. ವಾಟಾಳ್ ನಾಗರಾಜರು ಪರಿಸರದ ಬಗ್ಗೆ, ಕಲ್ಲಿನ ಬಗ್ಗೆ ಏನು ಹೇಳುತ್ತಾರೆ ಕೇಳಬೇಕು. ಕರ್ನಾಟಕವನ್ನು ಉಳಿಸಬೇಕು, ಕರ್ನಾಟಕವನ್ನು ಚಿನ್ನದ ನಾಡು ಗಂಧದ ಬೀಡು ಎಂದು ಏನು ಹೇಳುತ್ತಿದ್ದಾರೆ ಅದನ್ನು ಉಳಿಸುವುದಕ್ಕೆ ಏನು ನಿರ್ಣಯ ತಂದಿದ್ದಾರೋ ಅದರ ಬಗ್ಗೆ ಮಾತನಾಡುವುದು ಒಳ್ಳೆಯದು ಎಂದು ಕಾಗೋಡು ತಿಮ್ಮಪ್ಪನವರು ಹೇಳಿದಹಾಗೆ ನಾನೂ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಹಕ್ಕುಚ್ಯುತಿ ಬಗ್ಗೆ ಪ್ರತ್ಯೇಕವಾದ ನಿರ್ಣಯವನ್ನು ಕಳುಹಿಸಿ ಎಂದು ಹೇಳುವ ನಿರ್ಧಾರಕ್ಕೆ ತಾವು ಬಂದ್ದೀರಿ ಎಂದು ನನಗನ್ನಿಸುತ್ತದೆ ಕಾಗೋಡು ತಿಮ್ಮಪ್ಪನವರು ಅದೇ ನಿರ್ಧಾರಕ್ಕೆ ಬಂದಿದ್ದಾರೆ. ಆಯಿತು ಬೇರೆ ನಿರ್ಣಯ ಕಳುಹಿಸೋಣ. ಅದರ ಬಗ್ಗೆ ಚಿಂತೆ ಇಲ್ಲ. ಈ ಗ್ರಾನೈಟ್ ಕಲ್ಲು ಬರಿ ಕಲ್ಲೇ ಅಥವಾ ಇದರ ಹಿಂದೆ ಏನಿದೆ ? ಈ ಕಲ್ಲುಗಳನ್ನು ತೆಗೆಯಬೇಕಾದರೆ, ಈ ಕಲ್ಲುಗಳನ್ನು ಸಾಗಿಸಬೇಕಾದರೆ ಈ ಕಲ್ಲುಗಳ ಮೌಲ್ಯ ಎಷ್ಟು ? ಈ ಕಲ್ಲುಗಳನ್ನು ನಮ್ಮ ರಾಜ್ಯದಲ್ಲಿ ಯಾವ ರೀತಿ ತೆಗೆಯುತ್ತಿದ್ದಾರೆ ? ಇಡೀ ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಯಾವರೀತಿ ಈ ಕಲ್ಲುಗಳನ್ನು ತೆಗೆಯುತ್ತಿದ್ದಾರೆ ? ಈ ವಿಚಾರದಲ್ಲಿ ತಮ್ಮ ಗಮನಕ್ಕೆ ತರುವುದಾದರೆ ಅಧ್ಯಕ್ಷರೆ, ಕರ್ನಾಟಕದಲ್ಲಿ ೧೦೦ಕ್ಕೆ ೮೦ ಭಾಗ ಕಲ್ಲುಗಳನ್ನು ತೆಗೆಯುತ್ತಾ ಇದ್ದಾರೆ. ಬೇರೆ ರಾಜ್ಯಗಳಲ್ಲಿ ೨೦ ಭಾಗ ಮಾತ್ರ ತೆಗೆಯುತ್ತಿದ್ದಾರೆ. ಕರ್ನಾಟಕವ ಕಲ್ಲುಗಳು ಯಾವುದು ಎಂದರೆ ಬೆಲೆ ಬಾಳತಕ್ಕ ಕಲ್ಲುಗಳು. ಇವರ ಬೆಲೆ ಎಷ್ಟಿದೆ ಎಂದರೆ ಒಂದೊಂದು ಮಂತ್ರಿಮಂಡಲವನ್ನೇ ಉರುಳಿಸಬಹುದು, ಒಂದೊಂದು ಮಂತ್ರಿಮಂಡಲವನ್ನೇ ಕಟ್ಟಬಹುದು. ಅಷ್ಟು ಮೌಲ್ಯ ಅದಕ್ಕೆ ಇದೆ. ಈ ಕಲ್ಲು ಬರೀ ಬೆಲೆ ಬಾಳತಕ್ಕದ್ದು ಅಷ್ಟೇ ಅಲ್ಲ ಬಹಳ ಪವಿತ್ರವಾದಂಥವು. ಈ ಒಂದು ಕಲ್ಲಿನ ಪಾವಿತ್ರ್ಯತೆ ಏನು ಎಂಬುದನ್ನು ತಮ್ಮ ಗಮನಕ್ಕೆ ತರುವುದಾದರೆ ಇಡೀ ಪ್ರಪಂಚದಲ್ಲೇ ಕರ್ನಾಟಕದಂಥ ಈ ಕಲ್ಲುಗಳು ಸಿಗುವುದಿಲ್ಲ. ಪ್ರಪಂಚದ ಯಾವುದೇ ಮೂಲೆಯಲ್ಲೂ ಇದು ಸಿಗುವುದಿಲ್ಲ. ಈ ಕಲ್ಲನ್ನು ಧಾರಾಳವಾಗಿ ಮಾರುವುದಕ್ಕೆ ನಮ್ಮ ಸಚಿವರು ಅವಕಾಶವನ್ನು ಕೊಟ್ಟಿದ್ದಾರೆ.

ಇಡೀ ಪ್ರಪಂಚದಲ್ಲಿ ಎಲ್ಲಿಯೂ ಸಿಗದೇ ಇರುವಂಥ ಕಲ್ಲುಗಳನ್ನು ಧಾರಾಳವಾಗಿ ಹಗಲು ದರೋಡೆ ಮಾಡಿ ಯಾರು ಬೇಕಾದರೂ, ಎಲ್ಲಿ ಬೇಕಾದರೂ ಕಲ್ಲು ತೆಗೆದು ವಿದೇಶಗಳಿಗೆ ಮಾರುವುದಕ್ಕೆ ಬಹಳ ಗಂಭೀರವಾದಂಥ ವಾತಾವರಣವನ್ನು ನಿರ್ಮಾಣ ಮಾಡಿ ಕುಳಿತಿದ್ದೀರಿ. ನಾನು ತಮಗೆ ಹೇಳುತ್ತೇನೆ, ಈ ಕಲ್ಲಿನ ಹಿಂದೆ ಎಷ್ಟೆಷ್ಟು ಮೋಸ, ಅನ್ಯಾಯ, ಭ್ರಷ್ಟಾಚಾರ ನಡೆದಿದೆ. ಈ ಕಲ್ಲುಗಳನ್ನು ತೆಗೆಯುವುದರಿಂದ ಈ ರಾಜ್ಯದ ಸಂಪತ್ತಿನ ಪ್ರಶ್ನೆ ಏನು ? ಮಾನವ ಕುಲಕ್ಕೆ ಒಂದು ಅತ್ಯಂತ ಪರಿಣಾಮಕಾರಿಯಾದಂಥ, ಪವಿತ್ರವಾದಂಥಾದ್ದು ಈ ನಿಸರ್ಗ ಸಂಪತ್ತು. ಇವತ್ತು ಕರ್ನಾಟಕದಲ್ಲಿ ನಿಸರ್ಗಸಂಪತ್ತು ಏನಾಗಿದೆ ? ಅನೇಕ ಪವಿತ್ರವಾದಂಥ ಸ್ಥಳಗಳು, ರಮಣೀಯವಾದಂಥ ಸ್ಥಳಗಳು ನಮ್ಮಲ್ಲಿ ಇದ್ದು, ಈ ನಿಸರ್ಗದಿಂದ ಕವಿಪುಂಗವರೆಲ್ಲರೂ ತಮ್ಮ ಸ್ಫೂರ್ತಿ ಪಡೆದು ಉತ್ತಮವಾದ ಕವಿತೆಗಳನ್ನು ಬರೆದಂಥ ಅನೇಕ ಕವಿಗಳು ನಮ್ಮ ರಾಜ್ಯದಲ್ಲಿದ್ದಾರೆ. ಈ ಕವಿಗಳು ಕುಳಿತುಕೊಂಡು ನಿಸರ್ಗದ ರಮಣೀಯತೆ ನೋಡಿ ಬರೆಯುವುದಕ್ಕೆ ಯಾವ ಸ್ಥಳಗಳನ್ನೂ ಈಗ ತಾವು ಉಳಿಸುತ್ತಿಲ್ಲ. ನಮ್ಮಲ್ಲಿ ರಾಷ್ಟ್ರಕವಿ ಕುವೆಂಪು, ಅಡಿಗರು, ನಿಸ್ಸಾರ್ಅಹಮದ್ ಅವರಂಥ ಎಂತೆಂಥ ಮೇಧಾವಿ ಕವಿಗಳು ಇದ್ದಾರೆ. ಅವರು ನಿಸರ್ಗದ ಬಗ್ಗೆ, ರಮಣೀಯತೆ ಬಗ್ಗೆ, ಈ ನಾಡಿನ ಸೌಂದರ್ಯದ ಬಗ್ಗೆ ಹೇಳಲು ಈ ನಾಡನ್ನು ಕಟ್ಟಿದಂಥ ಅನೇಕ ದೊಡ್ಡ ದೊಡ್ಡ ಹಿರಿಯ ಕವಿಗಳು, ಈ ನಾಡನ್ನು ಕಂಡಂಥ ಕವಿಗಳು ಏನಿದ್ದಾರೆ ಅವರ ಮುಂದೆ ಇವತ್ತು ಇರುವುದು ಒಂದು ನಗ್ನ ಚಿತ್ರ. ಈ ನಿಸರ್ಗ ನಗ್ನವಾಗಿದೆ. ಅವರ ಕಣ್ಣೆದುರಿಗೆ ಈ ಪರಿಸ್ಥಿತಿ ಇದೆ. ಅವರ ಎದುರಿಗೆ ಈ ನಿಸರ್ಗವನ್ನು ಲೂಟಿ ಮಾಡಿ ನಿಸರ್ಗ ಸಂಪತ್ತನ್ನು ನಾಶಮಾಡಿ ವಿದೇಶಿ ವಿನಿಮಯ ಸಂಪಾದನೆಗೆ ಅವಕಾಶ ಕೊಡಬೇಕಾಗಿತ್ತೆ ? ಇದು ಮೊದಲನೆಯದು. ಈ ನಿಸರ್ಗ ನಾಶದಿಂದ ಮಾನವ ಕುಲಕ್ಕೆ ಏನು ಅಪಾಯ ಒದಗಬಹುದು ಎಂದು ವಿಚಾರಿಸಿದ್ದಾರೆಯೇ ? ಎಲ್ಲೆಲ್ಲಿ ಇವರು ನಿಸರ್ಗಸಂಪತ್ತನ್ನು ನಾಶ ಮಾಡಿ ಗ್ರಾನೈಟ್ ಕಲ್ಲುಗಳನ್ನು ತೆಗೆಯುವುದಕ್ಕೆ ಹೊರಟಿದ್ದಾರೆ, ಅಲ್ಲಿ ಎಲ್ಲಿಯಾದರೂ ಇವರು ಈ ಕಲ್ಲುಗಳಿಗೆ ಪರವಾನಿಗಿ ಕೊಡುವುದಕ್ಕೆ ಮುಂಚೆ ಇದುವರೆಗೆ ಏನಾದರೂ ಒಂದು ತನಿಖೆ, ವೈಜ್ಞಾನಿಕವಾಗಿ ಪರೀಕ್ಷೆಯ ವ್ಯವಸ್ಥೆ ನಡೆಸಿದ್ದಾರೆಯೇ ಎಂದು ನಾನು ಸರ್ಕಾರವನ್ನು ಕೇಳುತ್ತೇನೆ. ತಾವು ತೀರ್ಮಾನ ತೆಗೆದುಕೊಂಡಿರಿ, ಕಲ್ಲಿನ ಮಾಲೀಕರು ನಿಮ್ಮಲ್ಲಿಗೆ ಧಾಳಿ ಬಂದರು, ನಿಮ್ಮ ಕಾರ್ಯಾಲಯಕ್ಕೆ ನುಗ್ಗಿದರು. ತಾವು ತರಾತುರಿಯಿಂದ ಹಸನ್ಮುಖಿಯಾಗಿ ಆಶೀರ್ವಾದ ಮಾಡಿ, ತಾವು ತಮ್ಮ ಸಚಿವಸಂಪುಟ ಸಭೆಗೆ ಒತ್ತಾಯ ತಂದು ಇದರಲ್ಲಿ ತಾವು ಬಹಳ ಯಶಸ್ವಿಯಾಗಿದ್ದೀರಿ. ಈ ಒಂದು ನಿರ್ಣಯವನ್ನು ತೆಗೆದುಕೊಂಡು ಈ ಕಲ್ಲಿನ ಖಾಸಗಿ ಗುತ್ತಿಗೆದಾರರಿಗೆ ಕೊಡುವುದಕ್ಕೆ ತಾವು ಯಶಸ್ವಿಯಾಗಿದ್ದೀರಿ. ಯಾವುದರಲ್ಲಿ ಯಶಸ್ವಿಯಾಗಿದ್ದೀರಿ ? ಈ ನಾಡನ್ನು ಉಳಿಸುವುದರಲ್ಲಿ ಅಲ್ಲ. ಈ ನಾಡಿನ ಸಂಪತ್ತನ್ನು ಉಳಿಸುವುದರಲ್ಲಿ

ಅಲ್ಲ. ನೈಸರ್ಗಿಕ ಸೌಂದರ್ಯವನ್ನು ಉಳಿಸುವುದರಲ್ಲಿ ಅಲ್ಲ. ಈ ನಾಡನ್ನು ಲೂಟಿ ಮಾಡತಕ್ಕಂಥ ಅನೀತಿವಂತ, ಭ್ರಷ್ಟ, ಖಾಸಗೀ ಗುತ್ತಿಗೆದಾರರಿಗೆ ಅವಕಾಶ ಕೊಡುವುದಕ್ಕೆ ತಾವು ತರಾತುರಿಯಿಂದ ನಿಂತಿದ್ದೀರಿ. ಈ ನಾಡನ್ನು ಕೊಳ್ಳೆ ಹೊಡೆಯುವುದಕ್ಕೆ ಈ ಖದೀಮರಿಗೆ ಅವಕಾಶ ಕೊಡುವುದಕ್ಕೆ ತಾವು ನಿಂತಿದ್ದೀರಿ. ಎಷ್ಟು ಆತುರ ನಿಮಗೆ. ತಾವು ಬಂದು ಆರು ತಿಂಗಳು ಆಗಿದೆ. ಹಿಂದಿನ ಸರ್ಕಾರದವರು ತಮ್ಮಷ್ಟು ಧೈರ್ಯ ಮಾಡಲಿಲ್ಲ, ಅವರು ಭ್ರಷ್ಟಾಚಾರಿಗಳು ಅಲ್ಲವೆಂದು ನಾನು ಹೇಳುವುದಿಲ್ಲ. ಬಹುಶಃ ನಿಮ್ಮಷ್ಟು ಅಲ್ಲ. ತಮ್ಮ ಸರ್ಕಾರದ ಬಗ್ಗೆ ನನಗೆ ಅಪಾರವಾದ ಗೌರವ ಇತ್ತು. ಈ ಒಂದು ವ್ಯವಹಾರ ಮುಖ್ಯಮಂತ್ರಿಗಳ ಮೂಗಿನ ನೇರಕ್ಕೆ ಬಂದಿದೆಯೋ ಎಂದು ನನಗೆ ಇನ್ನೂ ಅನುಮಾನ. ಏಕೆಂದರೆ ನಾನು ಮುಖ್ಯಮಂತ್ರಿಗಳ ಬಗ್ಗೆ ಇಷ್ಟೊಂದು ನೇರವಾಗಿ ಲಘುವಾಗಿ ಮಾತನಾಡತಕ್ಕವನು ಅಲ್ಲ. ಶ್ರೀ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡಾಗ ಅವರ ಬಗ್ಗೆ ನನಗೆ ಅಪಾರವಾದ ಗೌರವ, ವಿಶ್ವಾಸ ಎಲ್ಲಾ ಇತ್ತು. ಅವರು ಈ ನಾಡಿನಲ್ಲಿ ಹಿಂದೆ ಒಬ್ಬ ಆದರ್ಶರಾದ ಮುಖ್ಯಮಂತ್ರಿಗಳಾಗಿದ್ದವರು. ಇವರ ಆಡಳಿತ ಬಂದಿದೆ. ಈ ಆಡಳಿತ ಬಂದಮೇಲೂ ಬಹುಶಃ ನನಗನಿಸುತ್ತದೆ, ಒಳ್ಳೆಯ ಉತ್ತಮವಾದ ಆಡಳಿತ ಬರುತ್ತದೆ ಎಂದೂ, ಇದು ಯಾವದೂ ನಡೆಯುವುದಿಲ್ಲವೆಂಬ ನಂಬಿಕೆಯನ್ನು, ಭ್ರಮೆಯನ್ನು, ಕನಸನ್ನು ಕಾಣುತ್ತಿದ್ದೇವೋ. ಇಂತಹವರ ಕಾಲದಲ್ಲೂ, ಇವರನ್ನೂ ಕೂಡ ತಪ್ಪು ದಾರಿಗೆ ಎಳೆಯಲಾಗಿದೆ. ‘ಮಹಾಭಾರತದಲ್ಲಿ ಧರ್ಮರಾಯನನ್ನು ಕರೆದು ನರಕವನ್ನು ತೋರಿಸಿದ ರೀತಿ’’ ನಿಮ್ಮ ಮುಖ್ಯಮಂತ್ರಿಗಳನ್ನು ತಪ್ಪು ದಾರಿಗೆ ಎಳೆದವರು ಯಾರು ? ಮತ್ತು ಮುಖ್ಯಮಂತ್ರಿಗಳಿಗೆ, ಅವರ ಗಮನಕ್ಕೆ ಈ ರಾಜ್ಯದ ಭೂಪಟದ ಸಮಗ್ರ ಸಮೀಕ್ಷೆ ಇದೆಯೋ ? ಎಲ್ಲೆಲ್ಲಿ ನಿಸರ್ಗ ಸಂಪತ್ತು ನಾಶವಾಗಿದೆ ಎಂದು ಮುಖ್ಯಮಂತ್ರಿಗಳಿಗೆ ಗೊತ್ತಿದೆಯೋ ? ಎಲ್ಲೆಲ್ಲಿ ಸಂಪತ್ತು ನಮ್ಮ ರಾಜ್ಯದಲ್ಲಿದೆ ಎಂಬುದು ಗೊತ್ತಿದೆಯೋ, ಸಂಪತ್ತಿನಲೆಕ್ಕ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸಚಿವರಾದ ತಮಗೆ ಗೊತ್ತಿದೆಯೋ ಹಿಂದೆ ನೀವು ರಾಜ್ಯದ ಉಳಿತಾಯ ಮಂತ್ರಿಗಳಾಗಿದ್ದರಿ ನನಗೆ ತಿಳಿದಹಾಗೆ ಆಗ ಕಿತ್ತೂರ್‌ರವರ ಮನೆಯ ಪಕ್ಕ ನಿಮ್ಮ ಮನೆ ಇತ್ತು. ಈಗ ಎಲ್ಲಿದೆ ಒಂದು ಕೋಟೆಯೊಳಗೆ ಇದ್ದ ಹಾಗೆ ಇದೆ. ನಾನು ಆಗ ತಮ್ಮನ್ನು ನೋಡಿದ್ದೆ. ಅಂದಿನಿಂದ, ಇಂದಿನವರೆಗೂ ತಾವು ರಾಜಕಾರಣದಲ್ಲಿದ್ದೀರಿ. ರಾಜ್ಯದ ಜವಾಬ್ದಾರಿ ಸ್ಥಾನದಲ್ಲಿ ಮಂತ್ರಿಗಳಾಗಿದ್ದೀರಿ. ತಮಗೇನಾದರೂ ತಲೆಯಲ್ಲಿ, ಮನಸ್ಸಿನಲ್ಲಿ, ಹೃದಯದಲ್ಲಿ ಈ ರಾಜ್ಯದಲ್ಲಿ ಸಂಪತ್ತು ಇದೆಯೆಂದು. ಈ ರಾಜ್ಯದಲ್ಲಿ ನಿಸರ್ಗ ಇದೆಯೆಂದು, ಈ ರಾಜ್ಯದ ನಿಸರ್ಗ ನಾಶವಾಗುತ್ತಿದೆ ಎಂದು ಇದೆಯೇ? ಇಡೀ ಪ್ರಪಂಚದಲ್ಲಿಯೇ ಅಮೂಲ್ಯವಾದಂಥ, ಉತ್ತಮವಾದಂಥ, ಸುಂದರವಾದ ಕಲ್ಲುಗಳು ಹೊರದೇಶಕ್ಕೆ ಹೋಗುವುದರಿಂದ ನಮ್ಮ ಈ ನಾಡು, ಯಾವ ಕನ್ನಡ ನಾಡು ಯಾವ ಕರ್ನಾಟಕ, ಸಂಪದ್ಭರಿತವಾದ ಈ ನಾಡಿನ ಪರಂಪರೆ ಹಾಳಾಗುವುದಕ್ಕೆ ಬಿಡಬಾರದು ಎನ್ನತಕ್ಕ ಸಣ್ಣ ಪರಿಜ್ಞಾನವಾದರೂ ತಮ್ಮ ತಲೆಗೆ ಬರಲಿಲ್ಲವೇ ? ತಾವು ಕನಸಿನಲ್ಲಿ, ನಗ್ನವಾಗಿ ಈ ತೀರ್ಮಾನಕ್ಕೆ ಬಂದಿದ್ದೀರಾ ? ಈ ನಾಡಿನ ರಕ್ಷಣೆ ಮಾಡತಕ್ಕಂಥ ಜವಾಬ್ದಾರಿ ಹೊತ್ತಿರತಕ್ಕಂಥ ನೀವು. ಅಂದರೆ ಸರ್ಕಾರ ಈ ನಾಡನ್ನು ಏನು ಮಾಡುತ್ತಿದ್ದೀರಿ. ನಿಸರ್ಗದ ಸುಂದರ ಮಗುವಿನ ಕತ್ತನ್ನು ಕೊಯ್ಯುತ್ತಿದ್ದೀರಿ, ಕಾಲನ್ನು ಕತ್ತರಿಸುತ್ತಿದ್ದೀರಿ ಹೃದಯವನ್ನು ಚಿಂದಿ, ಚಿಂದಿ ಮಾಡುತ್ತಿದ್ದೀರಿ. ಇವತ್ತು ನಿಸರ್ಗ ನಾಶವಾದರೆ ಏನಾಗಬಹುದು ? ತಮಗೆ ಹೇಳುತ್ತಿದ್ದೇನೆ ಚಾಮರಾಜನಗರ, ನಂಜನಗೂಡಿನಲ್ಲಿ ಭೂಮಿ ನಡುಗಿತು. ತಮಗೆ ಗೊತ್ತಿದೆಯೋ, ತಮ್ಮ ಇಲಾಖೆಯವರಿಗೆ ಗೊತ್ತಿದೆಯೋ ? ತಮ್ಮ ಇಲಾಖೆಯವರೇನು ದನ ಕಾಯುತ್ತಿದ್ದಾರೆಯೋ, ನಿಮ್ಮ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ದನಗಳನ್ನು ಕಾಯುತ್ತಿದ್ದಾರೆಯೇ. ಅಥವಾ ಕುರಿಗಳನ್ನು ಕಾಯುತ್ತಿದ್ದಾರೆಯೋ ? ಇದರ ಬಗ್ಗೆ ನಿಮ್ಮ ಕ್ರಮ ಏನು ? ಯಾವ ಕಾರಣದಿಂದ ಭೂಮಿ ನಡುಗಿತು, ಭೂಮಿ ನಡುಗಬೇಕಾದರೆ, ಕಾರಣ ಏನು ? ಇದರ ಹಿಂದೆ ಏನಿದೆ ? ಎಂದಾದರೂ ದಕ್ಷಿಣ ಇಂಡಿಯಾದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಭೂಮಿ ನಡುಗಿರುವುದನ್ನು ಇತ್ತೀಚಿನ ದಿನಗಳಲ್ಲಿ ನಾವು ನೋಡುತ್ತಿದ್ದೇವೆ. ಇದಕ್ಕೆ ಕಾರಣ ಏನು? ಪರ್ವತಗಳು, ಗುಡ್ಡಗಳು, ಸುಂದರವಾದ ದೇವಸ್ಥಾನಗಳು ಪವಿತ್ರವಾದ ಧರ್ಮಸ್ಥಳಗಳು, ಇವುಗಳನ್ನು ತಾವು ನೋಡಿದ್ದೀರಾ? ನೀವು ತಿರುಪತಿಗೆ ಹೋಗಿಬರುವುದನ್ನು ಮಾತ್ರ ನೋಡಿದ್ದೇನೆ. ಕರ್ನಾಟಕದಲ್ಲಿ ಮಹದೇಶ್ವರ ಬೆಟ್ಟ ನೋಡಿದ್ದೀರಾ, ಶಿವಗಂಗೆ ಬೆಟ್ಟ ನೋಡಿದ್ದೀರಾ, ಬಿಳಿಗಿರಿರಂಗನ ಬೆಟ್ಟ ನೋಡಿದ್ದೀರಾ, ಶ್ರವಣದುರ್ಗ ನೋಡಿದ್ದೀರಾ, ರಾಮದೇವರ ದುರ್ಗ ನೋಡಿದ್ದೀರಾ, ಬಸವೇಶ್ವರ ದೇವಸ್ಥಾನ ನೋಡಿದ್ದೀರಾ ? ಇವು ಯಾವುವೂ ನೀವು ನೋಡಿಲ್ಲವೆಂದು ನಾನು ಅಂದುಕೊಂಡಿದ್ದೇನೆ, ನಿಮಗೆ ಗೊತ್ತಿರುವುದು ಒಂದೇ ಒಂದು ತಿರುಪತಿ, ಇದು ಬಿಟ್ಟರೆ ಬೇರೆ ಗೊತ್ತಿಲ್ಲ...

ಶ್ರೀ ಬಸವರಾಜ ರಾಯರೆಡ್ಡಿ.— ಅವರು ತಿರುಪತಿ ದೇವಸ್ಥಾನ ಒಂದು ಬಿಟ್ಟು ಬೇರೆ ದೇವರಿಗೆ ನಾಸ್ತಿಕರು ಎಂದು ನನಗನಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್.— ಅದು ನನಗೆ ಗೊತ್ತಿಲ್ಲ. ಶಿವಗಂಗೆ ಬೆಟ್ಟದ ಮುಂದೆ ತಾವು ಕಣ್ಣೀರಿಡುತ್ತಿದ್ದೀರಿ. ಯಾವುದೇ ಸರ್ಕಾರ ಇದ್ದರೂ, ಇಂತಹ ಪ್ರಕರಣ ನಡೆದಿದ್ದರೆ ಲಕ್ಷಾಂತರ, ಕೋಟಿ ರೂಪಾಯಿಗಳ ವಿದೇಶಿವಿನಿಮಯ ಕರ್ನಾಟಕಕ್ಕೆ ಬರುವುದಿದ್ದರೂ ಆ ಹಣ ನಮಗೆ ಬೇಡ, ವಿದೇಶಿ ವಿನಿಮಯಕ್ಕಿಂತಲೂ ಒಳ್ಳೆಯ ಮೌಲ್ಯ ಈ ನಿಸರ್ಗ. ಈ ನಿಸರ್ಗ ರಮಣೀಯತೆಯನ್ನು ಎಂದೂ ಮಾರಬಾರದೆಂದು ತೀರ್ಮಾನ ಕೈಗೊಳ್ಳುತ್ತಿದ್ದರು. ಇವರು ನಿಸರ್ಗ ದ್ರೋಹಿಗಳು.

ನಿಸರ್ಗಕ್ಕೂ ನಿಮಗೂ ಸಂಬಂಧ ಇಲ್ಲ. ಸೌಂದರ್ಯಕ್ಕೂ ನಿಮಗೂ ಸಂಬಂಧ ಇಲ್ಲ. ನಿಮ್ಮ ವ್ಯವಸ್ಥೆ ಬೇರೆ. ನಿಮ್ಮ ಸೌಖ್ಯ ಒಂದಾದರೆ ಸಾಕು ಬೇರೆ ಏನೂ ನಿಮಗೆ ಬೇಡ.

ಶ್ರೀ ಕೆ. ಶಿವಮೂರ್ತಿ (ಭರಮಸಾಗರ).—ವಾಟಾಳ್ ನಾಗರಾಜ್ ಅವರು ಬಳಸತಕ್ಕಂಥ ಪದಗಳು ಪಾರ್ಲಿಮೆಂಟರಿ ಪ್ರೊಸೀಜರ್‌ಗೆ ಒಳಗಾಗುತ್ತವೆಯೋ ಎಂಬುದನ್ನು ನೋಡಬೇಕು. ಕೆಲವು ಪದಗಳನ್ನು ದಯವಿಟ್ಟು ಚೆಕ್ ಮಾಡಿಸಿ. ನಗ್ನರೂಪದಲ್ಲಿ, ದ್ರೋಹಿಗಳು, ದನಕಾಯುವವರು ಮುಂತಾದ ಪದಗಳನ್ನು ಅವರು ಬಳಸುತ್ತಿದ್ದಾರೆ. ಅವರು ಹೇಳತಕ್ಕಂಥ ವಿಚಾರ ಏನೋ ಸರಿ ಇದೆ. ನಿಸರ್ಗದ ಬಗ್ಗೆ ಅವರು ಇಟ್ಟಿರತಕ್ಕಂಥ ಅಭಿಮಾನಕ್ಕೆ ನಾನು ಚಿರಋಣಿ. ಆದರೆ ಅವರು ಬಳಸತಕ್ಕಂಥ ಪದಗಳು, ಈ ಸದನದ ಪರಂಪರೆಯಲ್ಲಿ, ಕನ್ನಡದ ಪರಂಪರೆಯಲ್ಲಿ, ಕನ್ನಡದ ಚರಿತ್ರೆಯಲ್ಲಿ ಬರುತ್ತವೆಯೋ ? ಇದಕ್ಕೆ ಎಷ್ಟು ಬೆಲೆ ಇದೆ ? ದಯವಿಟ್ಟು ಇದನ್ನು ನೋಡಿ ಅವರು ಹೇಳತಕ್ಕಂಥ ದನಕಾಯುವವರು, ನಗ್ನತೆ ಇದು ಪಾರ್ಲಿಮೆಂಟರಿ ಪದ್ಧತಿಗೆ ಅನ್ವಯಿಸುತ್ತವೆಯೋ ಎಂಬುದನ್ನು ನೋಡಿ.

ಶ್ರೀ ಬಸವರಾಜ ರಾಯರೆಡ್ಡಿ.—ಅವರು ಅಧಿಕಾರಿಗಳ ಬಗ್ಗೆ ಹೇಳುತ್ತಿದ್ದಾರೆ. ಮಂತ್ರಿಗಳ ಬಗ್ಗೆ ಅಲ್ಲ.

ಶ್ರೀ ಕೆ. ಶಿವಮೂರ್ತಿ.—ಇವು ಪಾರ್ಲಿಮೆಂಟರಿ ಪದ್ಧತಿಯಲ್ಲಿ ಉಪಯೋಗಿಸಬಹುದಾದ ಪದಗಳೇ, ಇವು ಸಮಂಜಸವಾದುದೇ ಎಂಬುದನ್ನು ನೋಡಬೇಕು.

ಶ್ರೀ ವಾಟಾಳ್ ನಾಗರಾಜ್.—ದನಕಾಯುವವರು, ದ್ರೋಹ ಈ ಎಲ್ಲಾ ಪದಗಳು ಏನೇನೂ ಇಲ್ಲ. ಈ ಸದನದಲ್ಲಿ ಏನೇನೋ ನಡೆದಿದೆ. ಅದನ್ನು ನೋಡಿದರೆ ಇದು ಏನೂ ಅಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಹಿಂದೆ ನಡೆದ ವಿಚಾರಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಹೋಗುವುದಿಲ್ಲ, ಇದು ಸಾಮಾನ್ಯ. ಇದಕ್ಕಿಂತ ಸಂಸದೀಯ ಪದಗಳು ಬೇರೆ ಇಲ್ಲ. ಇದನ್ನು ಸಂಸದೀಯ ಪದಗಳಲ್ಲಿ ಎಂದು ಹೇಳಿ ಎಂದು ಹೇಳತಕ್ಕದ್ದು ಸರಿಯಾದ ನೀತಿ ಅಲ್ಲ. ನಮ್ಮ ಮಾನ್ಯ ಸಚಿವರು ಏನಿದ್ದಾರೆ ಅವರ ಬಗ್ಗೆ ನನಗೆ ಗೌರವ ಇದೆ.

ವೈಸ್ ಚೇರ್ಮನ್.—ಮುಂದುವರಿಸಿ.

ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು),—ಸನ್ಮಾನ್ಯ ನಾಗರಾಜ್‌ರವರು ಬಹಳ ಅನುಭವಿ ಪಾರ್ಲಿಮೆಂಟೇರಿಯನ್. ಯಾವ ಯಾವ ಸಂದರ್ಭದಲ್ಲಿ ಯಾವರೀತಿ ತಮ್ಮ ವಿಷಯವನ್ನು ಪ್ರತಿಪಾದನೆ ಮಾಡಬೇಕು ಎಂಬುದರಲ್ಲಿ ಅವರು ಪರಿಣಿತರು. ಇವತ್ತಿನವರೆಗೂ ನಾವು ಕೆಲವಾರು ಪದಗಳನ್ನು ಇಲ್ಲಿ ಉಪಯೋಗಿಸಬಾರದೆಂದುಕೊಂಡಿದ್ದೆವು. ವಿಧಾನಸಭಾ ಸದಸ್ಯರಿಗೂ ಮತ್ತೊಬ್ಬರಿಗೂ ಕೆಲವು ವ್ಯತ್ಯಾಸಗಳು ಇರುತ್ತವೆ. ವಿಧಾನಸಭಾ ಸದಸ್ಯರಾದ ನಮಗೆ ಕೆಲವು ಗೌರವಗಳು ಇವೆ. ನಾವು ಯಾರೋ ಮಾತನಾಡಿದ ಹಾಗೆ ಮಾತನಾಡುವುದು ಶೋಭೆಯಲ್ಲ. ನನಗೆ ಅವರಿಗೆ ಉಪದೇಶ ಮಾಡತಕ್ಕ ಶಕ್ತಿ ಇಲ್ಲ ನನಗೆ ಉಪದೇಶ ಮಾಡತಕ್ಕ ಶಕ್ತಿ ಅವರಿಗಿದೆ. ಯಾವುದೋ ಪದಗಳನ್ನು ಉಪಯೋಗಿಸಿದರೆ ನಮ್ಮ ಸಮಸ್ಯೆಗಳು ಬಗೆಹರಿಯುವುದಿಲ್ಲ ನಮ್ಮ ಸಮಸ್ಯೆಗಳು ಬಗೆಹರಿಯಬೇಕಾದರೆ ಪಾರ್ಲಿಮೆಂಟೇರಿಯನ್ ಆದವನು ಯಾವ ರೀತಿ ಮಾಡಬೇಕೆಂದು ತಿಳಿದುಕೊಂಡಿದ್ದರೆ ಸಾಕು. ಅವರು ಉಪಯೋಗಿಸಿದ ಪದಗಳು ಅನ್‌ಪಾರ್ಲಿಮೆಂಟರಿ ಅಲ್ಲ ಆದರೆ ಒಂದು ಶಬ್ದವನ್ನು ಉಪಯೋಗಿಸಿದಾಗ ಇನ್ನೊಬ್ಬರ ಮನಸ್ಸಿಗೆ ಅದು ಸರಿಯಲ್ಲ ಎಂಬುದು ಅವರ ಮನಸ್ಸಿಗೆ ಬರಬಾರದು. ಇದನ್ನು ನಾವು ತಿಳಿದುಕೊಳ್ಳಬೇಕು.

ವೈಸ್ ಚೇರ್ಮನ್.—ನಾಗರಾಜ್‌ರವರೇ ಮುಂದುವರಿಸಿ.

ಶ್ರೀ ಬಿ. ಶಿವಣ್ಣ (ಗಣಿ ಮತ್ತು ಭೂವಿಜ್ಞಾನ ಸಚಿವರು).—ನೊಂದ ಮನಸ್ಸಿನಿಂದ ತಾವು ಹೇಳುತ್ತಿದ್ದೀರಿ. ಮುಂದುವರಿಸಿ. You have got a right to speak Please speak.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಪಾಟೀಲ್ ನಾಗರಾಜ್‌ರವರು ಕೇವಲ ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದು ಅಧಿಕಾರ ನಡೆಸಿದವರಿಗೆ ಮಾತ್ರವಲ್ಲ ಹೇಳುತ್ತಿರುವುದು, ನಮಗೆ ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿಯವರೆಗೆ ಯಾರು ಯಾರು ಅಧಿಕಾರ ನಡೆಸಿದ್ದಾರೋ ಅವರಿಗೆಲ್ಲಾ ಹೇಳುತ್ತಿದ್ದಾರೆ. All of them have been enemies of the echo system. ಎಂದು ಇಂಗ್ಲೀಷ್‌ನಲ್ಲಿ ಹೇಳಿದರೆ ಏನೂ ಬೇಜಾರಾಗುವುದಿಲ್ಲ. I am just saying in English. ಅವರು ಇಂಗ್ಲೀಷ್‌ನಲ್ಲಿ ಹೇಳದೆ, ಕನ್ನಡದಲ್ಲಿ ಹೇಳುತ್ತಿದ್ದಾರೆ. ನಿಸರ್ಗ ದ್ರೋಹಿಗಳು ಎಂದರೆ ಇಂಗ್ಲಿಷ್‌ನಲ್ಲಿ ಎನಿಮೀಸ್ ಆಫ್ ಎಕೋ ಸಿಸ್ಟಮ್ ಎಂದು. ಆ ರೀತಿ ಹೇಳಿದರೆ ಅದನ್ನು ಸಹಿಸಿಕೊಳ್ಳುತ್ತಾರೆ. They are all enemies of echo system. But, the fact remains that we have been working against the economic balance. ಈ ಇಲಾಖೆಯವರ ಬಗ್ಗೆ ಅವರು ಉಪಯೋಗಿಸಿರುವ ಪದಗಳು ಬಹಳ ಕಡಿಮೆ ಆಯಿತು. ಈ ಇಲಾಖೆಯವರು ದನ ಕಾಯುತ್ತಿಲ್ಲ, ಕುರಿ ಕಾಯುತ್ತಿಲ್ಲ ಕಲ್ಲು ತಿನ್ನುತ್ತಿದ್ದಾರೆ, ಸುಣ್ಣ ತಿನ್ನುತ್ತಿದ್ದಾರೆ, ಮರಳು ತಿನ್ನುತ್ತಿದ್ದಾರೆ. ಸಾವಿರಾರು ಕೋಟಿ ರೂಪಾಯಿಗಳ ನಿಸರ್ಗ ಸಂಪತ್ತು ಖಾಸಗಿಯವರ ಮನೆ ಸೇರುತ್ತಿದೆ. ಅದಕ್ಕೆ ಅಧಿಕಾರಿಗಳು ಶಾಮೀಲಾಗಿದ್ದಾರೆ. ಇದರ ಬಗ್ಗೆ ಏನು ಪದ ಉಪಯೋಗಿಸಿದರೂ ಅದು ಅನ್ ಪಾರ್ಲಿಮೆಂಟರಿ ಅಲ್ಲ. ನಾನು ನಮ್ಮ ಹಳ್ಳಿಯ ಪದಗಳನ್ನು ಉಪಯೋಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಅಷ್ಟೆ. ಅದು ಅನ್ ಪಾರ್ಲಿಮೆಂಟರಿ ಅಲ್ಲ. If it is parliamentary in my village it is parliamentary in this country and in this House. ನೀವು ಮುಗಿಸಿದ ಮೇಲೆ ನಾನು ಹಳ್ಳಿಯ ಪದಗಳಿಗೆ ಬರುತ್ತೇನೆ.

ಶ್ರೀ ಪಾಟೀಲ್ ನಾಗರಾಜ್.—ಆದ್ದರಿಂದ ನಮ್ಮ ಪ್ರೊಫೆಸರ್ ನಂಜುಂಡಸ್ವಾಮಿಯವರ ನನ್ನ ಮಾತಿನ ಧಾಟಿಯನ್ನು ಒಪ್ಪಿಕೊಂಡ ಮೇಲೆ ನನಗೆ ಬಹಳ ಸಂತೋಷವಾಯಿತು. ಕಲ್ಲಿನ ಬಗ್ಗೆ ಅವರೊಬ್ಬ ರೈತರ ಮುಖಂಡರಾಗಿ ಈ ರಾಜ್ಯದಲ್ಲಿ ಅವರು ಅಪಾರವಾದ ಸೇವೆಯನ್ನು ಮಾಡಿದ್ದಾರೆ. ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಕಲ್ಲಿನ ಬಗ್ಗೆ ಅವರಿಗೆ ಅಪಾರವಾದ ಕಳಕಳಿ ಇದೆ ಮತ್ತು ಕಲ್ಲು ಈ ರಾಜ್ಯದ ಗಡಿ ದಾಟಿ ಬೇರೆ ರಾಜ್ಯದ ಕಡೆಗೆ ಕಳುಹಿಸಿಕೊಡುವ ಬಗ್ಗೆ ಅನೇಕ ರೀತಿಯ ಚಳುವಳಿಗಳನ್ನು ಮಾಡಿರತಕ್ಕಂಥ ಕೀರ್ತಿ ಅವರಿಗೆ ಸಲ್ಲುತ್ತದೆ. ಆದ್ದರಿಂದ ಅದರ ಕಷ್ಟ ಅವರಿಗೆ ಚೆನ್ನಾಗಿ ಗೊತ್ತಿದೆ. ಹೆತ್ತವಳಿಗೆ ಗೊತ್ತು ಮಕ್ಕಳನ್ನು ಹೆರುವ ಕಷ್ಟ ಮಕ್ಕಳನ್ನು ಹೆರದೆ ಇರುವ ಬಂಜೆಗೆ ಏನು ಗೊತ್ತು ಮಕ್ಕಳನ್ನು ಹೆರುವ ಕಷ್ಟ ಈ ಸರ್ಕಾರಕ್ಕೆ ಏನು ಗೊತ್ತು ? ಈ ಸರ್ಕಾರ ಬಂಜೆ. ಮಕ್ಕಳನ್ನು ಹೆತ್ತವರಿಗೆ ಮಕ್ಕಳ ಮೇಲೆ ಇರತಕ್ಕಂಥ ಮಮತೆ ಪ್ರೀತಿ ವಾತ್ಸಲ್ಯ ಗೊತ್ತಾಗುತ್ತದೆ. ಬಂಜೆಗೆ ಏನು ಗೊತ್ತಾಗುತ್ತದೆ ಆ ಕಷ್ಟ.

ಛೇರ್ಮನ್.—ಅವರು ಬ್ಯಾಚೆಲರ್ ಅವರಿಗೆ ಏನು ಗೊತ್ತು ?

ಶ್ರೀ ಪಾಟೀಲ್ ನಾಗರಾಜ್.—ಇನ್ನೂ ಅವರನ್ನು ತಡೆದು ನಿಲ್ಲಿಸುವುದಕ್ಕೆ ಆಗುವುದೇ ಇಲ್ಲ. ಅವರಿಗೆ ಲಂಗು ಲಗಾಮ್ ಯಾವುದೂ ಇರುವುದಿಲ್ಲ. ಇನ್ನು ಆ ಬಗ್ಗೆ ವ್ಯಾಖ್ಯಾನ ಮಾಡುವುದು ಬೇಡ. ಮುಗಿದು ಹೋಯಿತು. ಹಿಂದೆ ನಮ್ಮ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರಾದ ಭಗವತಿಯವರು ಈ ನಿಸರ್ಗ ಸಂಪತ್ತು ಕೆಲವರ ಸ್ವತ್ತು ಅಲ್ಲ. ಶತ ಶತಮಾನಗಳಿಂದ ಕೂಡಿ ಬಂದಿರುವಂತಹ ಈ ನಿಸರ್ಗ ಸಂಪತ್ತು ಈ ಪ್ರಪಂಚದ ಭೂಮಿ ಮತ್ತು ಆಕಾಶಗಳು ಇರುವವರೆವಿಗೂ ಇರಬೇಕು, ಇದನ್ನು ಕೆಲವರಿಗೆ ಬಿಡುವುದಕ್ಕೆ ಆಗುವುದಿಲ್ಲ. ಇದನ್ನು ತೋಡಿ ತೆಗೆದು ದರೋಡೆ ಮಾಡಿ ಮಾರಾಟ ಮಾಡುವುದಕ್ಕೆ ಅವಕಾಶ ಇಲ್ಲವೆಂದು ಒಂದು ಸಂದರ್ಭದಲ್ಲಿ ತೀರ್ಪು ಕೊಟ್ಟಿದ್ದಾರೆ. ಶ್ರೀಮಾನ್ ಭಗವತಿಯವರು ಕೊಟ್ಟ ತೀರ್ಪನ್ನು ಬಹುಶಃ ನಮ್ಮ ಸರ್ಕಾರ ಅಳತೆಗೋಲು ಹಾಕಿ ನೋಡಿಕೊಳ್ಳಬೇಕು. ಕರ್ನಾಟಕ ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಈ ರಮಣೀಯವಾದ ನಿಸರ್ಗ ಸಂಪತ್ತು ಇದೆ. ಇಂತಹ ನಿಸರ್ಗ ಸಂಪತ್ತು ಲೂಟಿಯಾಗುತ್ತಿದೆ. ದರೋಡೆಯಾಗುತ್ತಿದೆ. ಇದರ ಬಗ್ಗೆ ಮೊದಲು ಮಾಹಿತಿ ಬೇಕು. ಈ ಬಗ್ಗೆ ಮಾಹಿತಿ ಇದುವರೆವಿಗೂ ಅವರ ಇಲಾಖೆಯಲ್ಲಿ ಇಟ್ಟಿಲ್ಲ. ಆ ಬಗ್ಗೆ ನಮಗೆ ವರದಿ ಬೇಕು. ನಾನು ತಿಳಿದುಕೊಂಡ ಮಟ್ಟಿಗೆ ಆ ವರದಿ ಸಹ ಇಟ್ಟಿಲ್ಲ. ಮತ್ತು ಎಷ್ಟು ಕಲ್ಲು ವಿದೇಶಕ್ಕೆ ಸಾಗಿಸುತ್ತಿದ್ದಾರೆ ಅದು ಸಹ ಮಾಹಿತಿ ಅವರಲ್ಲಿ ಇಲ್ಲ. ಅವರೀಗ ಹೇಳಬಹುದು. ಮಂಗಳೂರು ಬಂದರುನಿಂದ ಎಷ್ಟು ಹೋಗುತ್ತದೆ ಎನ್ನುವ ಲೆಕ್ಕ ನಮಗೆ ಸಿಕ್ಕಿದೆ ಎಂದು. ಅದಕ್ಕಿಂತ ಮುಂಚಿತವಾಗಿ ಹೋದ ಕಲ್ಲಿನ ಲೆಕ್ಕ ಎಲ್ಲಿ ತರುತ್ತೀರಿ ? ಆಮೇಲೆ ಲಾರಿಗಳಲ್ಲಿ ಬೇರೆ ಬೇರೆ ರಾಜ್ಯಗಳಿಗೆ ಕಲ್ಲು ಹೋಗತಕ್ಕಂಥದ್ದು ಮತ್ತು ಕಲ್ಲಿನ ಸಂಪತ್ತು ದರೋಡೆ ಮಾಡಿ ಮಾರಾಟ ಮಾಡಿರುವಂತಾದ್ದು ನಿಮ್ಮ ಇಲಾಖೆಯಲ್ಲಿ ಲೆಕ್ಕ ಇಲ್ಲ. ಕಾರಣ ನಿಮ್ಮ ಇಲಾಖಾಧಿಕಾರಿಗಳು ಮತ್ತು ಅವರ ಕುಟುಂಬದವರು ಅವರಿಗೆ ಸಹಾಯ ಮಾಡತಕ್ಕಂಥ ಏಜೆಂಟರು. ನಿಮ್ಮ ಇಲಾಖೆಯ

ನಿವೃತ್ತ ಅಧಿಕಾರಿಗಳು ಗುತ್ತಿಗೆದಾರರ ಕೈಯಲ್ಲಿ ಇದ್ದಾರೆ. ತಾವು ಇದನ್ನು ನೋಡಬೇಕು. ನಿಮ್ಮ ಇಲಾಖೆಯ ಬಗ್ಗೆ ಹಿಂದೆ ಸಿ ಒ ಡಿ ತನಿಖೆ ನಡೆದಿದೆ. ಈ ಇಲಾಖೆಯ ೪-೫ ಜನ ಮಂತ್ರಿಗಳು ಯಾವ ತರಹ ಬದಲಾವಣೆ ಆದರೂ ಎನ್ನುವುದನ್ನು ತಾವು ಗಮನಿಸಬೇಕು. ೪-೫ ಜನ ಮಂತ್ರಿಗಳು ಗಣಿ ಇಲಾಖೆಗೆ ಬಂದರು. ಅವರು ಏನೋ ತರಾತುರಿಯಲ್ಲಿ ತನಿಖೆ ಮಾಡಿಸುತ್ತೇನೆ ಎಂದು ಹೇಳಿದ ಹದಿನೈದು ದಿವಸಗಳಲ್ಲಿ ಪಲ್ಟಿ ಹೊಡೆದರು. ಅವರನ್ನು ತಕ್ಷಣ ಅಲ್ಲಿಂದ ತೆಗೆಸುತ್ತಾರೆ. ಗುತ್ತಿಗೆದಾರರು ಅವರನ್ನು ಬಿಡುವುದಿಲ್ಲ. ಈ ಬಗ್ಗೆ ಏನಾದರೂ ಒಂದು ಮಾತು ಹೇಳಿದರೆ ಸಾಕು ಗಣಿ ಮಾಲೀಕರು, ಅಕ್ರಮ ಗಣಿ ಮಾಲೀಕರು ಸುತ್ತಮುತ್ತ ನಿಂತು ನಿಮ್ಮ ಧ್ವನಿಯನ್ನು ಕಡಿಮೆ ಮಾಡುತ್ತಾರೆ. ನೀವು ಶಾರೀರಿಕವಾಗಿ ಚೆನ್ನಾಗಿ ಇರಬಹುದು. ನಾನು ಯಾವ ರೀತಿ ಹೇಳಬಹುದೋ ಆ ರೀತಿ ಕಡಿಮೆ ಮಾಡುತ್ತಾರೆ. ನಿಮ್ಮ ಶಕ್ತಿ ಕಡಿಮೆ ಮಾಡುತ್ತಾರೆ. ಗುತ್ತಿಗೆದಾರರು ಅವರ ಸಮ್ಮೋಹನಾಸ್ತ್ರವನ್ನು ನಿಮ್ಮ ಮೇಲೆ ಬಿಡುತ್ತಾರೆ. ಇದು ಮೊದಲಿನಿಂದಲೂ ನಮ್ಮ ಸಮಾಜದಲ್ಲಿ ನಡೆದುಕೊಂಡು ಬಂದಿದೆ. ಆ ಸಮ್ಮೋಹನಾಸ್ತ್ರಕ್ಕೆ ಎಲ್ಲರೂ ಜಾರಿ ಬೀಳುತ್ತಾರೆ. ಅದೂ ಇವರು ಹೇಳದೆ ಕೇಳದೆ ಜಾರಿ ಬೀಳುತ್ತಾರೆ. ಅದೂ ನಿಮ್ಮ ಸರ್ಕಾರ ಬಂದಮೇಲೂ ನೀವೂ ಜಾರಿ ಬಿದ್ದಿರಿ. ಈ ಸರ್ಕಾರ ಸಂಪನ್ಮೂಲಗಳನ್ನು ಕ್ರೋಢೀಕರಿಸತಕ್ಕಂಥಾದ್ದರಲ್ಲಿ ನಿಪುಣರೆಂದು ತಾವೇ ಹೇಳಿಕೊಂಡಿದ್ದೀರಿ. ಹಿಂದಿನ ಸರ್ಕಾರ ದುಡ್ಡು ಇಲ್ಲದೆ ಮಾಡಿದೆ, ಖಜಾನೆ ಖಾಲಿ ಮಾಡಿದ್ದಾರೆ. ಆ ಖಜಾನೆಯನ್ನು ತುಂಬುವುದಕ್ಕೆ ನಾವೇ ಶಿವಶರಣರು. ನಮ್ಮನ್ನು ಬಿಟ್ಟರೆ ಈ ಜಗತ್ತಿನಲ್ಲಿ ಬೇರೆ ಯಾರೂ ಇಲ್ಲ. ನಾವೇ ಸರಿ ಎಂದು ಹೇಳಿಕೊಂಡು ಬಂದಿರಿ. ಮತ್ತು ಈ ಸಭೆಯಲ್ಲೂ ತಾವು ಕಳೆದ ೬ ತಿಂಗಳುಗಳಿಂದ ಅದನ್ನೇ ಹೇಳುತ್ತಿದ್ದೀರಿ. ನಮ್ಮ ಹಣಕಾಸಿನ ಸಚಿವರಂತೂ ಖಜಾನೆಯನ್ನು ಭದ್ರವಾಗಿ ಹಿಡಿದುಕೊಂಡಿದ್ದಾರೆ. ಅವರು ಖಜಾನೆ ಬಗ್ಗೆ ತುಂಬಾ ನಿಷ್ಠೆ ಇಟ್ಟುಕೊಂಡಿದ್ದಾರೆ. ಅವರು ಎಲ್ಲಿಯವರೆಗೆ ಹೋಗಿದ್ದಾರೆಂದರೆ ಯಾರಾದರೂ ಮಾತನಾಡಿದರೆ ಅವರ ಜೊತೆಯಲ್ಲಿ ನಾಲ್ಕು ಮಾತುಗಳನ್ನು ಆಡಿದರೆ ಎಲ್ಲಿ ನಷ್ಟವಾಗಿ ಬಿಡುತ್ತದೆಯೊ ಎನ್ನುವ ಮಟ್ಟಕ್ಕೆ ಹೋಗಿದ್ದಾರೆ.ಪಾಪ ಅವರು ಸರ್ಕಾರದ ಖಜಾನೆಯನ್ನು ಭದ್ರವಾಗಿ ಕಾಯುತ್ತಿದ್ದಾರೆ. ನಮ್ಮ ಹಣಕಾಸಿನ ಸಚಿವರು ಈ ರಾಜ್ಯದ ಬೊಕ್ಕಸವನ್ನು ಸಮಗ್ರವಾಗಿ ಉಳಿಸಲು ಪ್ರಾಮಾಣಿಕ ಪ್ರಯತ್ನವನ್ನು ನಡೆಸುತ್ತಿದ್ದಾರೆ.

(ಶ್ರೀ ಎಸ್. ಎಂ. ಕೃಷ್ಣರವರು ಅಧ್ಯಕ್ಷ ಪೀಠಕ್ಕೆ ಬಂದರು)

೧೨-೪೫ ಪಿ. ಎಂ.

ಶ್ರೀ ಬಸವರಾಜ ರಾಯರೆಡ್ಡಿ.—ಅವರು ಈ ಸದನಕ್ಕೆ ಬರದೇ ಟ್ರೆಜರಿ ಕಾಯುತ್ತಾ ಅಲ್ಲೇ ಇದ್ದಾರೆಂದು ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್,—ನಮ್ಮ ಹಣಕಾಸಿನ ಸಚಿವರು ಈ ಸರ್ಕಾರದ ಖಜಾನೆ ತುಂಬುವುದರಲ್ಲಿ ಅನೇಕ ನಿರ್ಣಯಗಳನ್ನು ಕೈಗೊಂಡಿದ್ದಾರೆ. ಈ ಮಧ್ಯದ ಅವ್ಯವಹಾರವನ್ನು ತಡೆಯುವುದು ಇನ್ನು ಅನೇಕ ಒಳ್ಳೆಯ ಕಲ್ಯಾಣವಾದ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ ನಿಜ. ನಿಮ್ಮ ಸರ್ಕಾರಕ್ಕೆ ಹಣದ ಕೊರತೆ ಇದೆ ಮತ್ತು ಈ ಕೊರತೆ ಎಲ್ಲಿಯವರೆಗೆ ಇದೆ ಅಂದರೆ ತಮ್ಮ ಜೊತೆಯಲ್ಲಿ ಯಾವ ರೀತಿ ಮಾತನಾಡುತ್ತಾರೋ ಗೊತ್ತಿತ, ನಾವಂತೂ ಅನೇಕ ಜನ ಅವರ ಬಳಿಗೆ ಹೋಗಿದ್ದೇವೆ, ಅವರ ಬಗ್ಗೆ ಗೌರವವಿದೆ, ಇವರು ಮಾತನಾಡುವುದೇ ಕಷ್ಟ. ನಾವು ೨೫ ಮಾತನಾಡಿದರೆ ಅವರು ಒಂದು ಮಾತನಾಡುತ್ತಾರೆ. ಅದರಲ್ಲಿಯೂ ಇವರು ಉಳಿತಾಯ ಮಾಡುತ್ತಾರೆ ಮಾತೇ ಇಲ್ಲ ಗಂಭೀರವಾಗಿ ಕುಳಿತಿರುತ್ತಾರೆ. ಇದು ಚಿತ್ರವೊ, ಅಥವಾ ವ್ಯಕ್ತಿಯೋ ಏನೂ ಇದು ಈ ಸಮಸ್ಯೆ ನಮಗೆ ಬಹಳ ಭಯವಾಗುತ್ತದೆ: ಮಾತಿಲ್ಲ ಕತೆಯಿಲ್ಲ, ಯಾರ ಹತ್ತಿರ ನಾವು ಮಾತನಾಡೋಣ ? ನಾವು ಎದ್ದೇಳು ಮಂಜುನಾಥೇಶ್ವರ ಅಂತ ಪ್ರಾರ್ಥನೆ ಮಾಡುವ ಹಾಗೆ. ನಾವು ಎದ್ದೇಳು ರಾಜಶೇಖರ ಮೂರ್ತಿ ಎಂದು ಕೈಮುಗಿದು ಪ್ರಾರ್ಥನೆ ಮಾಡಬೇಕು. ಅವರ ಹತ್ತಿರ ನಾಲ್ಕು ಪದಗಳನ್ನು ತೆಗೆದುಕೊಳ್ಳಬೇಕಾದರೆ ನಾವು ನಮ್ಮ ಶರೀರಕ್ಕೆ ಬಹಳ ಕಷ್ಟ ಕೊಡಬೇಕಾಗುತ್ತದೆ. ನಮಗೆ ಅವರ ಬಗ್ಗೆ ಬಹಳ ಒಳ್ಳೆಯ ಅಭಿಪ್ರಾಯವಿದೆ. ಅವರು ಒಳ್ಳೆಯ ಧಕ್ಷರು ಅವರ ಬಗ್ಗೆ ನನ್ನದೇನೂ ಇಲ್ಲ. ನನಗೆ ಪ್ರಾಮಾಣಿಕವಾದ ನೋವಾಗಿದೆ ಭಗವಂತನ ಆಣೆಯಾಗಿ ಹೇಳುತ್ತೇನೆ. ನನಗೆ ಈ ಸಭೆಯ ಬಗ್ಗೆ ಗೌರವವಿದೆ. ಈ ಸಭೆಗೆ ಬಹಳ ದಿವಸದ ನಂತರ ಬಂದಿದ್ದೇನೆ. ನಾನು ಈ ಸಭೆಗೆ ಕಾಲಿಡಬೇಕಾದರೆ ಜನತೆಯ ಕಾಲಿಗೆ ಪ್ರಣಾಮಗಳನ್ನು ಸಲ್ಲಿಸಿದೆ. ಮೂರು-ಮೂರುವರೆ ವರ್ಷಗಳಿಂದ ಕಲ್ಲುಗಳು ಏನು ಹೇಳುತ್ತಿದೆ ಇದರಿಂದ ನನಗೆ ಬಹಳ ನೋವಾಗಿದೆ. ಅಂದರೆ ಈ ಕಲ್ಲುಗಳು ನಮ್ಮ ಮಕ್ಕಳ ಸಮಾನ. ಇಂಥ ಕಲ್ಲುಗಳನ್ನು ಕತ್ತರಿಸಿ, ಕತ್ತರಿಸಿ, ಹಾಕುತ್ತಿದ್ದಾರೆ. ತಾವು ಕಲ್ಲುಗಳಿರುವ ಅನೇಕ ಕಡೆ ಪ್ರವಾಸ

ಮಾಡಲೇಬೇಕು. ಸರ್ಕಾರದ ಬಗ್ಗೆ ಮಾತನಾಡಬೇಡಿ. ತಾವು ಒಂದು ಕಡೆಯಿಂದ ಎಲ್ಲೆಲ್ಲಿಗೆ ಹೋಗಬೇಕೆಂದು ನಾನು ಹೇಳುತ್ತೇನೆ, ತಾವು ಲೂಟಿಯಾಗಿ ದರೋಡೆಯಾಗಿರುವ ಸ್ಥಳಕ್ಕೆ ಹೋಗಬೇಕು. ತಾವು ಮಂಗಳೂರು ಬಂದರನ್ನು ನೋಡಬೇಕು. ನಮ್ಮ ಕರ್ನಾಟಕದ ಬಂದರುಗಳ, ಗುಡಿಗಳ, ದೇವಸ್ಥಾನಗಳ, ಧರ್ಮಸ್ಥಳಗಳ ಎಲ್ಲಾ ಕಲ್ಲನ್ನೂ ಸರ್ಕಾರದ ಕಲ್ಲನ್ನು ದರೋಡೆ ಮಾಡಿ ಮಂಗಳೂರಿನ ಬಂದರಿನಲ್ಲಿಟ್ಟಿದ್ದಾರೆ. ನಮ್ಮ ಮಂಗಳೂರು ಬಂದರುಗಳಲ್ಲಿರುವ ಕಲ್ಲಿನ ಮೌಲ್ಯವೆಷ್ಟು ? ನನ್ನ ವಾದ ಮತ್ತು ನನ್ನ ವೈಯಕ್ತಿಕ ಅಭಿಪ್ರಾಯವೇನೆಂದರೆ ರಾಜ್ಯದಲ್ಲಿ ಎಲ್ಲಿಯೂ ಕಲ್ಲನ್ನು ತೆಗೆಯಬಾರದು. ಈ ರಾಜ್ಯದ ನಿಸರ್ಗವನ್ನು ಉಳಿಸುವುದಕ್ಕೆ ಈ ರಮಣೀಯತೆಯನ್ನು ಉಳಿಸುವುದಕ್ಕೆ ನಾಡನ್ನು ಉಳಿಸುವುದಕ್ಕೆ ಎಂತೆಂಥವರು ಶ್ರಮಪಟ್ಟಿರುವರೆಂದು ತಮಗೆ ಗೊತ್ತು. ನನ್ನ ವೈಯಕ್ತಿಕ ವಾದ ಏನೆಂದರೆ ೧೦೦ಕ್ಕೆ ೧೦೦ ರಷ್ಟು ಇನ್ನು ಮುಂದೆ ಈ ಕಲ್ಲನ್ನು ತೆಗೆಯಬಾರದು ಎನ್ನುವುದು. ಆದರೂ ಸಹ ಕಲ್ಲನ್ನು ತೆಗೆಯಬೇಕು ನನ್ನ ಉಸಿರು ಇರುವವರೆಗೆ, ಈ ಕಲ್ಲಿಗಾಗಿ ಹೋರಾಟ. ದರೋಡೆ ಮಾಡಲೇಬೇಕು ನಿಸರ್ಗದ ಸಂಪತ್ತು ನಮಗೆ ಬೇಡವೇ ಬೇಡ ನಾವು ನಿಸರ್ಗ ಸಂಪತ್ತನ್ನು ನಾಶ ಮಾಡಿಯೇ ಮಾಡುತ್ತೇವೆ. ನಮ್ಮ ಖಜಾನೆಗೆ ಹಣಬೇಕೇ ಬೇಕು ಎಂಬ ವಾದ ಮಾಡಿ ಕಳ್ಳ ಕದೀಮರ ಜೊತೆ ಸರ್ಕಾರ ಹೊಂದಾಣಿಕೆ ಮಾಡಿಕೊಂಡರೆ ನಾನು ನನ್ನ ಚಳುವಳಿಯನ್ನು ಮುಂದುವರಿಸಲೇ ಬೇಕಾಗುತ್ತದೆ. ಯಾರ ಜೊತೆ ಹೊಂದಾಣಿಕೆ ಯಾರು ? ಅವರ ಇತಿಹಾಸ ಏನು ? ಎಷ್ಟು ಕಲ್ಲುಗಳನ್ನು ವಿದೇಶಕ್ಕೆ ಸಾಗಿಸಿದ್ದಾರೆ. ಅವರ ಪರಿಸ್ಥಿತಿಗಳೇನು ಎಂಬುದನ್ನು ತಿಳಿಯಬೇಕಾದರೆ ತಾವು ಅಲ್ಲಿಗೆ ಹೋಗಿನೋಡಬೇಕು ನನ್ನ ಮಾಹಿತಿಯ ಪ್ರಕಾರ ಕನಿಷ್ಟ ೫೦೦ ಕೋಟಿಯಿಂದ ೧೦೦೦೦ ಕೋಟಿಯವರೆಗೆ ಕಲ್ಲನ್ನು ಮಂಗಳೂರಿನ ಬಂದರಿನಲ್ಲಿ ಸುಮಾರು ೧೦೦ ಎಕರೆ ಪ್ರದೇಶದಲ್ಲಿ ಜೋಡಿಸಿದ್ದಾರೆ. ಶಿವಗಂಗೆ ಪ್ರದೇಶದ ಬೆಟ್ಟದ ಮೇಲೆ ಒಂದು ಮಹದೇಶಮ್ಮನ ದೇವಸ್ಥಾನ ಇದೆ. ಅದನ್ನು ತಾವು ನೋಡಬೇಕು. ಅದಕ್ಕೆ ಶತಶತಮಾನಗಳಿಂದ ಸಾವಿರಾರು ವರ್ಷಗಳಿಂದ ಅದರ ಒಂದು ಇತಿಹಾಸವಿದೆ. ಮಹದೇವಮ್ಮ ಅವರ ಮಾವನ ಜೊತೆಯಲ್ಲಿ ರಸ್ತೆಯಲ್ಲಿ ಹೋಗುವಾಗ ಆಗ ಇದ್ದಕ್ಕಿದ್ದಹಾಗೆ ಕಲ್ಲಿನಲ್ಲಿ ಐಕ್ಯವಾಗುತ್ತಾಳೆ. ಬರೀ ಆಗ ಶಬ್ದವು ಮಾತ್ರ ಬರುತ್ತದೆ ಮಾವ ಎಲ್ಲಿ ಸೊಸೆ ಎಂದು ಕೇಳಬೇಕಾಗುತ್ತದೆ.

ಇವತ್ತು ಅಧ್ಯಕ್ಷರೇ ಆ ಕಲ್ಲುಗಳನ್ನು ನೆಲಸಮ ಮಾಡಿ ಮಂಗಳೂರು ಬಂದರಿಗೆ ಸಾಗಿಸಿ ಡಾಲರುಗಳನ್ನು ಪಡೆದಿದ್ದಾರೆ. ಇವತ್ತು ಮಹದೇವಮ್ಮನ ದೇವಸ್ಥಾನ ಅಲ್ಲಿಲ್ಲ. ತಾವು ಅದನ್ನು ನೋಡಬೇಕು. ಮತ್ತು ಶಿವಗಂಗೆ ಸತ್ತಾ ಮತ್ತು ಪವಿತ್ರವಾದಂಥ, ರಮಣೀಯವಾದಂಥ ಧರ್ಮಸ್ಥಳವಾಗಿತ್ತು. ಅದರ ಮೇಲೆ ಕೆಂಪೇಗೌಡರ ಒಂದು ಸ್ಮಾರಕ ಇದೆ ಈ ಒಂದು ಕೆಂಪೇಗೌಡರ ಪ್ರತಿಮೆ ಅಲ್ಲಿ ಇದೆ. ಇನ್ನೊಂದು ಸುಂದರವಾದ ಹೊನ್ನಾದೇವಿ ಪ್ರತಿಮೆ ಅದರ ಮೇಲಿದೆ. ಹಾಗೂ ಇನ್ನೊಂದು ಶಿವಲಿಂಗ ಇದೆ. ಅಲ್ಲಿಗೆ ನಾನೊಂದು ಸಾರಿ ಹೋಗಿ ಕಲ್ಲುಗಳನ್ನು ನೋಡೋಣವೆಂದು ಹೋದಾಗ ಅಲ್ಲಿ ಪೂಜೆ ಮಾಡತಕ್ಕಂಥ ಪೂಜಾರಿ ಹೇಳಿದರು. ಇಲ್ಲಿ ಸಿಡಿಮದ್ದುಗಳನ್ನು ಇಡುತ್ತಿರುವುದರಿಂದ ಇಲ್ಲಿರುವ ಶಿವಲಿಂಗ ಅದುರುತ್ತದೆ ಎಂದು. ಈ ಮಾತನ್ನು ಅವರು ಹೇಳಬೇಕಾದರೆ ಯಾರ ಹೃದಯ ಇದರಿಂದ ಕರಗುವುದಿಲ್ಲ ? ಯಾರ ಮನಸ್ಸು ನೋಯುವುದಿಲ್ಲ ? ಇದು ಧರ್ಮಸ್ಥಳ, ಒಂದು ಪವಿತ್ರವಾದಂಥ ಸ್ಥಳ. ತುಪ್ಪವನ್ನು ಲಿಂಗಕ್ಕೆ ಸವರಿದರೆ ಬೆಣ್ಣೆಯಾಗುತ್ತದೆ. ಇದು ಸತ್ಯ. ನಾನು ಕಣ್ಣಾರ ನೋಡಿರತಕ್ಕಂಥದ್ದು. ಹೊನ್ನಾದೇವಿ ದೇವಸ್ಥಾನದ ಜಾಗ ಒಂದು ಪವಿತ್ರವಾದ ಸ್ಥಳ. ಇದರ ಮೇಲೆ ಕೆಂಪೇಗೌಡರ ಸ್ಮಾರಕ ಇದೆ. ಶಿವಗಂಗೆ ಬೆಟ್ಟವನ್ನು ದುರುಸ್ತಿ ಮಾಡಬೇಕಾದರೆ ಯಾವುದೇ ಸರ್ಕಾರವಾಗಲೀ ಜನರಾಗಲೀ ಯಾರು ಇದಕ್ಕೆ ಕೈ ಸಹಾಯ ಕೊಟ್ಟಿಲ್ಲವೆಂದು ಹೇಳಲಾಗಿದೆ. ಆದರೆ ಇದಕ್ಕಾಗಿ ಖಜಾನೆಯಲ್ಲಿ ಹಣ ಇಡಲಾಗಿದೆಯೆಂದು ಹೇಳಿದ್ದಾರೆ. ಅದು ಕೆಂಪೇಗೌಡರ ಶಾಸನದಲ್ಲೂ ಕೂಡಾ ಇದೆ ಆದರೆ ಅಲ್ಲಿರುವ ಕಲ್ಲುಗಳನ್ನು ಬೋಳಿಸಿ ಹೊಡೆದು ಮಹದೇವಮ್ಮನ ದೇವಸ್ಥಾನವನ್ನು ನೆಲಸಮ ಮಾಡಿದ್ದಾರೆ. ಇನ್ನೊಂದು ಕಡೆ ಬಿಳಿಗಿರಿ ರಂಗನ ಬೆಟ್ಟಕ್ಕೆ ಹೋಗಬೇಕು. ಬಿಳಿಗಿರಿ ರಂಗನ ಬೆಟ್ಟವನ್ನು ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. ತಾವು ಸಹ ಒಂದುಸಾರಿ ಹೋಗಿ ನೋಡಿಕೊಂಡು ಬರಬೇಕು. ಆ ಬೆಟ್ಟವನ್ನು ಕತ್ತರಿಸಿ ಹಾಕಿದ್ದಾರೆ. ಬೆಟ್ಟದ ಮೇಲೆ ಸುಮಾರು ಒಂದು ಕಿಲೋಮೀಟರ್ ದೂರ ಬೆಟ್ಟವನ್ನು ಕತ್ತರಿಸಿ ಕತ್ತರಿಸಿ ಆ ಕಲ್ಲುಗಳನ್ನು ತೆಗೆದುಕೊಂಡು ಮಾರಾಟ ಮಾಡಿದ್ದಾರೆ. ಮಹದೇಶ್ವರ ಬೆಟ್ಟವು ಒಂದು ಪವಿತ್ರವಾದ ಸ್ಥಳ. ಇದು ಸತ್ಯ. ಹಿಂದೆ ಅದಕ್ಕೆ ಒಂದು ಇತಿಹಾಸ ಇದೆ ನಾಡಿನ ಜನಪದದಲ್ಲಿ ಅದರ ಬಗ್ಗೆ ಇತಿಹಾಸದಲ್ಲಿ ಏಳು ಮಲೈ, ಎಪ್ಪತ್ತೇಳು ಮಲೈ ಮಹದೇಶ್ವರನಿಗೆ ಉಗೇ ಎಂದು ಹೇಳಿದ್ದಾರೆ. ಏಳು ಮಲೈ ಮತ್ತು ಎಪ್ಪತ್ತೇಳು ಮಲೆಗಳನ್ನು ದಾಟಿ ಬೆಟ್ಟದದೇವಸ್ಥಾನಕ್ಕೆ ಹೋಗಬೇಕು. ಏಳು ಮಲೆ ಮತ್ತು ಎಪ್ಪತ್ತೇಳು ಮಲೆಗಳಲ್ಲಿ ಈ ಕಲ್ಲಿನ ಖದೀಮರು ಲೂಟಿಯನ್ನು ಮಾಡುತ್ತಿದ್ದಾರೆ. ಅಥವಾ ಕಲ್ಲುಗಳನ್ನು ತೆಗೆದಿದ್ದಾರೆ. ಅನೇಕ ಕಡೆ ನನ್ನ ಪ್ರಕಾರ ಆ ಬೆಟ್ಟದಲ್ಲಿ ಸುಮಾರು ೧೫೦ ಗಣಿಗಳನ್ನು

ತೋಡಿದ್ದಾರೆ. ಈ ಜಾಗಗಳಿಂದ ಕಲ್ಲುಗಳನ್ನು ವಿದೇಶಗಳಿಗೆ ಮಾರಾಟ ಮಾಡಿ ಫಾರಿನ್ ಎಕ್ಸ್‌ಚೇಂಜ್‌ನು ಪಡೆದಿದ್ದಾರೆ. ಯಾರಿಗೋಸ್ಕರ ಈ ಶಿವಗಂಗೆ ಬೆಟ್ಟ ಮತ್ತು ಮಹದೇಶ್ವರ ಬೆಟ್ಟದಲ್ಲಿರತಕ್ಕ ಕಲ್ಲುಗಳನ್ನು ಮಾರಾಟ ಮಾಡಲಾಯಿತು ? ಬಿಳಿಗಿರಿ ರಂಗನ ಬೆಟ್ಟವು ಒಂದು ಧರ್ಮಸ್ಥಳದ ರೀತಿ ಇದೆ, ಇಲ್ಲಿನ ಕಲ್ಲುಗಳನ್ನೆಲ್ಲಾ ಹರಾಜು ಹಾಕಲಾಗಿದೆ. ಕಾನೂನು ಪ್ರಕಾರ ವಿಗ್ರಹಗಳನ್ನು ಕದ್ದುಮಾರಿದರೆ ಅಂಥವರುಗಳನ್ನು ಹತ್ತಾರು ವರ್ಷಗಳ ಕಾಲ ಜೈಲಿಗೆ ಹಾಕಲಾಗುತ್ತದೆ. ಈ ರೀತಿ ನೀವು ಕಲ್ಲುಗಳನ್ನು ಮಾರಾಟ ಮಾಡಿರುವುದರಿಂದ ನಿಮ್ಮನ್ನು ಯಾವ ಜೈಲಿಗೆ ಹಾಕಬೇಕು ?

ಅಧ್ಯಕ್ಷರು.—ನನ್ನನ್ನಾ ?

ಶ್ರೀ ವಾಟಾಳ್ ನಾಗರಾಜ್ —ತಮ್ಮನ್ನು ಆ ಭಾವನೆಯಿಂದ ನಾನು ಕಾಣುತ್ತಿಲ್ಲ. ನಾನಂತು ಆ ಭಾವನೆಯಿಂದ ಎಂದೆಂದೂ, ಇತಿಹಾಸದಲ್ಲೇ ತಮ್ಮನ್ನು ಕಾಣುವುದಿಲ್ಲ. ಅದು ತಮಗೂ ಗೊತ್ತು. ನೈಸರ್ಗಿಕ ಸಂಪತ್ತಿನ ಬಗ್ಗೆ ತಮಗೆ ನಂಬಿಕೆ ಇದೆ. ಅದರ ಬಗ್ಗೆ ವಿಶ್ವಾಸ. ಪ್ರೇಮ ಇದೆ, ರಮಣೀಯತೆ ಬಗ್ಗೆ ತಮಗೆ ಬಹಳ ಗೌರವ ಇದೆ. ಆಮೇಲೆ ದಿವಂಗತ ಕೆಂಗಲ್ ಹನುಮಂತಯ್ಯನವರಿಗೂ ಕೂಡ ನಮ್ಮ ನಾಡಿನ ಅಪಾರ ಕಳಕಳಿ ಇತ್ತು. ಅರಣ್ಯದ ಸಂಪತನ್ನು ಕಾಪಾಡುವುದರ ಬಗ್ಗೆ ಅವರಿಗೆ ಅಭಿಮಾನ ಇತ್ತು.

ಅಧ್ಯಕ್ಷರು.—ವಿಧಾನ ಸೌಧವನ್ನು ಕಲ್ಲನ್ನೇ ತಾನೇ ಉಪಯೋಗಿಸಿ ಕಟ್ಟಿರುವುದು.

ಶ್ರೀ ವಾಟಾಳ್ ನಾಗರಾಜ್.—ಯಾವ ಕಲ್ಲು, ಎಲ್ಲಿಯ ಕಲ್ಲು. ಎಲ್ಲಿ ತೆಗೆಯಬೇಕು, ಎಲ್ಲಿ ತೆಗೆಯಬಾರದು ? ಎಂಬುದು ಬಹಳ ಪ್ರಾಮುಖ್ಯವಾದಂಥ ವಿಚಾರ. ಇಲ್ಲಿ ನಾವು ಗುಲ್ಬರ್ಗದ ಅಮೂಲ್ಯವಾದ, ರಮಣೀಯವಾದ ಕಲ್ಲುಗಳನ್ನು ತಂದು ಸೌಧವನ್ನು ಕಟ್ಟಲಿಲ್ಲ ಇಲ್ಲಿ ದೊಡ ಬಳ್ಳಾಪುರದ ಚಪ್ಪಡಿ ಕಲ್ಲನ್ನು ಉಪಯೋಗಿಸಿದ್ದಾರೆ. ಹೀಗೆ ಮನೆಗಳನ್ನು ಕಟ್ಟಡಗಳನ್ನು ಕಟ್ಟುವುದಕ್ಕೆ ಕಲ್ಲುಗಳನ್ನು ಉಪಯೋಗಿಸತಕ್ಕಂಥಾದ್ದು ಇದೆ.

ಬಿಜಾಪುರದಲ್ಲಿ ಗುಗ್ಗುಲಮರಿ ಬಸವೇಶ್ವರ ದೇವಸ್ಥಾನ ಇದೆ. ಒಂದು ಕಾಲದಲ್ಲಿ ಆ ದೇವಸ್ಥಾನಕ್ಕೆ ಯಾರೋ ಒಬ್ಬರು ಜಹಾಗೀರುದಾರರು ಒಂದು ಜಮೀನನ್ನು ದಾನವಾಗಿ ಕೊಟ್ಟರು. ಆಗ ಮಾನ್ಯ ಎಸ್. ಆರ್. ಕಂಠಿಯವರು ಆ ಸಂಸ್ಥೆಯ ಅಧ್ಯಕ್ಷರಾಗಿದ್ದರು ಮತ್ತು ವಿದ್ಯಾ ಇಲಾಖೆಯ ಮಂತ್ರಿಯಾಗಿದ್ದರು. ಯಾರೋ ದಾನ ಕೊಟ್ಟರಲ್ಲ ಎಂದು ಹೇಳಿ ಬ್ಯಾಂಕನಲ್ಲಿ ೨ ಸಾವಿರ ರೂಪಾಯಿಗಳ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಮಠದವರು ಜಮೀನನ್ನು ಉಪಯೋಗಿಸಿದರು. ಈಗ ಆ ದೇವಸ್ಥಾನಕ್ಕೆ ಯಾರೋ ಒಬ್ಬ ಗ್ರ್ಯಾನೈಟ್ ಕಲ್ಲಿನ ಅಧ್ಯಕ್ಷ ಒಬ್ಬ ವೀರಮಣಿ ಎಂಬಾತ ಅಧ್ಯಕ್ಷನಾಗಿದ್ದಾನೆ. ಅವನು ಯಾರು ಮತ್ತು ಈ ಕಂಟ್ರಾಕ್ಟರ್‌ಗಳ ಎಲ್ಲಾ ಹೆಸರು ಸರಕಾರಕ್ಕೆ ಗೊತ್ತಿದೆ. ಈ ಮನುಷ್ಯ ಅದನ್ನು ತಿರುಗಿ ಮಠದಿಂದ ಐದು ಲಕ್ಷ ರೂಪಾಯಿಗಳಿಗೆ ಗುತ್ತಿಗೆಗೆ ತೆಗೆದುಕೊಂಡರು. ಆ ಮಠದವರಿಗೆ ತುಂಬಾ ಖುಷಿಯಾಯಿತು ೨೫ ಸಾವಿರಕ್ಕೆ ಹೋಗುವ ಜಾಗಕ್ಕೆ ೫ ಲಕ್ಷ ಬಂತಲ್ಲ ಎಂದು, ಸಂತೋಷವೂ ಆಯಿತು ತಮಗೆ ನಾನು ಕೊಡುತ್ತಿರುವ ಈ ಮಾಹಿತಿ ಸತ್ಯಕ್ಕೆ ದೂರವಾದುದು ಎಂದು ಅನಿಸಿದರೆ ದಯಮಾಡಿ ಒಂದು ಸಮಿತಿಯನ್ನು ಅಲ್ಲಿಗೆ ಕಳುಹಿಸಿ ಕೊಡಿ. ಈ ವಿಷಯದ ಅಂದಾಜು ಆಗುತ್ತದೆ. ಸುಮಾರು ೫೦೦ ಕೋಟಿ ರೂಪಾಯಿಗಳಷ್ಟು ಮೊತ್ತದ ಬೆಲೆಯುಳ್ಳ ಕಲ್ಲನ್ನು ೬೦೦ ಎಕರೆ ಪ್ರದೇಶದಲ್ಲಿ ತೆಗೆದಿದ್ದಾರೆ ಹಾಗಾದರೆ ನಾವು ಇವೊತ್ತು ಎಲ್ಲಿಗೆ ಹೋಗುತ್ತಾ ಇದ್ದೇವೆ ? ಎಲ್ಲಿಗೆ ತಲುಪುತ್ತಾ ಇದ್ದೇವೆ ? ಇವೊತ್ತು ಗುತ್ತಿಗೆದಾರರಿಗೆ ಈ ರೀತಿಯಾಗಿ ಕಲ್ಲು ಕೊಡುವುದಕ್ಕೆ ಕಲ್ಲುಗಳೇನಾದರೂ ನಿರಂತರವಾಗಿ ಬೆಳೆಯುತ್ತಾ ಇರುತ್ತವೆಯೋ ? ಅವುಗಳನ್ನು ನೀರು ಹಾಕಿ ಬೆಳೆಸಬಹುದಾಗಿದೆಯೋ ? ನೀರು ಹಾಕಿ ಬೆಳೆಸುವುದಕ್ಕೆ ಅವೇನು ಈಚಲು ಮರಗಳೇ ? ಈಚಲು ಮರಗಳನ್ನು ಬೇಕಾದರೆ ಬೆಳೆಸಿ ಹೆಂಡವನ್ನು ತೆಗೆಯಬಹುದಾಗಿದೆ. ಅದನ್ನು ತಯಾರಿಸುವುದಕ್ಕೆ ಡಿಸ್ಟಿಲರಿಗಳು ಇವೆ. ಆದರೆ ಈ ಕಲ್ಲನ್ನು ವಿದೇಶಗಳಿಗೆ ಸಾಗಿಸುವುದಕ್ಕೆ ಏನು ಸರಕಾರಗಳು ಪರವಾನಿಗೆ ಕೊಟ್ಟಿದೀರಲ್ಲ ಇವುಗಳು ಮತ್ತೆ ಎಲ್ಲಿಂದ ಬರಬೇಕು ? ಬಹಳ ಅಂದರೆ ಇನ್ನೂ ಹತ್ತು ವರ್ಷಗಳು ನಮಗೆ ಇದ್ದವುಗಳು ಬರಬಹುದು. ಆಮೇಲೆ ಮುಂದೇನು ? ಆ ಮೇಲೆ ಉಳಿಯತಕ್ಕಂಥಾದ್ದು ಅದರ ಡಿಪಾಸಿಟ್ ಮಾತ್ರ, ಈ ಹತ್ತು ವರ್ಷಗಳು ಕಳೆದ ಮೇಲೆ ನಿಮ್ಮ ಸರಕಾರದ ಮುಖ್ಯ ಮಂತ್ರಿಗಳು, ತಾವುಗಳು, ಎಲ್ಲರೂ ಬೇವಿನ ಸೊಪ್ಪುಕಟ್ಟಿಕೊಂಡು ಡಾನ್ಸ್, ನರ್ತನ ಮಾಡಿದರೂ ಕೂಡ ಹೋದ ಕಲ್ಲು ಮತ್ತೆ ಬರುವುದಿಲ್ಲ ಇದು ಸತ್ಯ. ಹಾಗಾದರೆ ಇದರ ಉದ್ದೇಶ ಏನು ? ಇಪ್ಪತ್ತು ಕೋಟಿ ರೂಪಾಯಿಗಳ ಉಳಿತಾಯ ? ಇವೊತ್ತು ಆಗಲೇ ಮಾನ್ಯ ಹಣಕಾಸಿನ ಸಚಿವರು ೪೦ ಕೋಟಿಗಳಿಗೆ ಜಂಪ್ ಆಗಿದ್ದಾರೆ. ನಮ್ಮ ಪ್ರಕಾರ ಅವರು ತಿಳಿಸಿರುವುದು ೧೦ ರಿಂದ ೨೦ ಕೋಟಿಗಳು ಇವರಿಗೆ ಒಂದು ಕೋಟಿ ಅಂದರೆ ಒಂದು ಪೈಸೆಗೆ ಸಮಾನವಾಗಿದೆ. ಮೊದಲು ೧೦ ರಿಂದ ೨೦ ಕ್ಕೆ ಬಂದರು, ಇವೊತ್ತು ಹಣಕಾಸಿನ ಸಚಿವರು ೪೦ ಕೋಟಿಗಳಿಗೆ ಬಂದರು,

ಹೀಗೆ ಎರಡು ತಿಂಗಳುಗಳಲ್ಲಿ ೪೦ ಕೋಟಿಗೆ ಬಂದಿದ್ದಾರೆ. ಮಾನ್ಯ ಸಚಿವರು ಶಿವಣ್ಣನವರಿಗೆ ಅದರಲ್ಲಿ ಒಳಗೆ ಏನೇನು ಇದೆ ಎಂಬುದು ಇನ್ನೂ ಗೊತ್ತಾಗಿಲ್ಲ. ಸ್ವಲ್ಪ ಮಾತ್ರ ತಿಳಿದಿರಬಹುದು. ಇದರ ಹಿಂದೆ ಎಂಥೆಂಥ ಕೈಗಳು ಇವೆ, ಎನ್ನುವುದು ಇನ್ನೂ ಗೊತ್ತಾಗಬೇಕಷ್ಟೆ ?**

ಶ್ರೀ ಬಿ. ಶಿವಣ್ಣ (ಗಣಿ ಮತ್ತು ಭೂ ವಿಜ್ಞಾನ ಸಚಿವರು).—ಮಾನ್ಯ ಸದಸ್ಯರು ಎಂಥೆಂಥ ಮಾತನ್ನಾಡಿದ್ದಾರೆ ? ನಾನು ಬಂದಾದರೂ ಎಷ್ಟು ದಿವಸವಾಯಿತು ? ಏನಂಥ ಪಾಪವನ್ನು ನಾವು ಮಾಡಿದ್ದೇವೆ ? ಸ್ವಾಮಿ, ೨೨ ನೇ ತಾರೀಖು ನಾವು ನೋಟಿಫಿಕೇಷನ್ ಮಾಡಿದ್ದುದು, ಅಲ್ಲಿಗೆ ಎಷ್ಟು ದಿವಸವಾಯಿತು ? ಇದೆಲ್ಲ ಆರೇಳೆಂಟು ವರ್ಷಗಳಿಂದ ನಡೆದುಕೊಂಡು ಬಂದಿದೆ. ತಾವು ನಮ್ಮ ರಕ್ಷಣೆಗೆ ಬರಬೇಕು, ಆ ಎಲ್ಲಾ ಪಾಪವನ್ನು ನಮ್ಮ ಮೇಲೆ ಹಾಕಿದರೆ ಹೇಗೆ ಸ್ವಾಮಿ ?

ಶ್ರೀ ಎಂ. ಪಿ. ವೆಂಕಟೇಶ್.—ನಿಮಗೆ ಏನೂ ಗೊತ್ತಿಲ್ಲ ನಡೆದಿರೋದರ ಬಗ್ಗೆ, ಬೇರೆ ಮಂತ್ರಿಗಳು ಇದರ ಮುಂದಾಳತ್ವ ವಹಿಸಿರೋದು. ನಮ್ಮ ಅನುಮಾನವೆಂದರೆ ನೀವು ಬಹಳ ದಿವಸ ಆ ಖಾತೆಯಲ್ಲಿರಲು ಬಿಡುವುದಿಲ್ಲ. ನೀವಾದರೂ ಈಗಿನ ನಿರ್ಣಯದಿಂದ ತೊಂದರೆ ಬರುತ್ತದೆಂದು ಹೇಳಬಹುದಿತ್ತು,

ಶ್ರೀ ಬಿ. ಎಂ. ಇದಿನಬ್ಬ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಹಿಂದಿನ ಸರ್ಕಾರ ಮಾಡುತ್ತಿದ್ದುದನೆಲ್ಲ ಸುಮ್ಮನೆ ನೋಡಿಕೊಂಡಿದ್ದು ಈಗ ಮಾತಾಡುತ್ತಿದ್ದಾರೆ.

ಶ್ರೀ ಎಂ. ಪಿ. ವೆಂಕಟೇಶ್.—ನ್ಯಾಷನಲೈಸ್ ಎಂದು ಮಾಡಿದ್ದುದು ನಿಮ್ಮ ಸರ್ಕಾರವೇ, ನಿಮ್ಮ ಸರ್ಕಾರ ಈಗ ಲೂಟಿ ಹೊಡೆಯುತ್ತಿದೆ. ಮೈಸೂರು ಮಿನರಲ್ಸ್ ಸಂಸ್ಥೆಯವರು ಫಾರಿನ್‌ನಲ್ಲಿ ಕಡಿಮೆ ರೇಟ್‌ಗೆ ಅಗ್ರಿಮೆಂಟ್ ಮಾಡಿಕೊಂಡು ಬರುತ್ತಾರೆ. ೧೦ ಸಾವಿರ ಬೆಲೆ ಬಾಳುವ ಕಲ್ಲಿಗೆ ೪ ಸಾವಿರ ಬೆಲೆ ಕಟ್ಟುತ್ತಾರೆ. ಯಾವುದೇ ಸರ್ಕಾರವಿರಲಿ, ಅದು ಇದನೆಲ್ಲ ಕಂಟ್ರೋಲ್ ಮಾಡಬೇಕು. ೧೦ ಸಾವಿರದಲ್ಲಿ ೬ ಸಾವಿರ ಅಧಿಕಾರಿಗಳು ತಿಂದು ರಾಜ್ಯಕ್ಕೆ ಸೇರುವುದು ಬರೀ ೪ ಸಾವಿರ ಮಾತ್ರ. ಆದ್ದರಿಂದ ಒಳ್ಳೆಯ ಅಧಿಕಾರಿಗಳನ್ನು ಹಾಕಿ ಮೈಸೂರು ಮಿನರಲ್ಸ್ ಚೆನ್ನಾಗಿ ಕೆಲಸ ಮಾಡುವಂತೆ ಮಾಡಿ.

ಶ್ರೀ ಬಿ. ಎಂ. ಇದಿನಬ್ಬ.—ಅದನ್ನೇ ಮಾಡುತ್ತಿದ್ದೇವೆ.

ಶ್ರೀ ಎಂ. ಪಿ. ವೆಂಕಟೇಶ್.—ಸ್ವಾಮಿ, ಕಲ್ಲು, ತೆಗೆದು ರಫ್ತು ಮಾಡಲು ಹೊಸ ಕುಳಗಳು ಕಂಪೆನಿ ಹೆಸರಿನಲ್ಲಿ ರಿಜಿಸ್ಟರ್ ಮಾಡಿ ಈ ದಂಧೆಯಲ್ಲಿ ತೊಡಗಲು ಏನೆಲ್ಲ ಮಾಡಬೇಕೋ ಅವಕ್ಕೆಲ್ಲ ಇವರು ಅವಕಾಶ ಮಾಡಿಕೊಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ ನಾನು ಮಾನ್ಯ ಶಿವಣ್ಣನವರ ಆಯುಸ್ಸನ್ನು ದೇವರು ಹೆಚ್ಚಿಸಲಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅವರು ನೋವು ಮಾಡಿಕೊಳ್ಳಬಾರದು, ಮಾತಿನ ಭರದಲ್ಲಿ ಹಾಗೆ ಹೇಳಿದೆ ಅಷ್ಟೇ. ತಮಗೇ ಗೊತ್ತಿದೆ ವಿಗ್ರಹಗಳನ್ನು ಕಳ್ಳತನ ಮಾಡಿದರೆ ಎಷ್ಟು ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತಾರೆಂದು. ಇದು ಅಂತಹ ವಿಗ್ರಹಗಳನ್ನು ಮಾಡುವ ಸುಂದರ ಕಲ್ಲುಗಳನ್ನು ಸಾಗಿಸುತ್ತಿರುವ ಕೆಲಸ. ನಮ್ಮ ಸರ್ಕಾರಕ್ಕೆ ಇದರಿಂದ ಲಾಭ ಬರುತ್ತದೆ ಎನ್ನಬಹುದು. ಆದರೆ ಒಂದು ಕಡೆ ಸ್ವಲ್ಪ ಲಾಭ, ಇನ್ನೊಂದು ಕಡೆ ವಿಪರೀತ ನಷ್ಟ.

ಅರಣ್ಯ ಪ್ರದೇಶದಲ್ಲಿ ಒಂದು ಕಾನೂನು ಇದೆ, ವನ್ಯ ಮೃಗಗಳಿಗೆ ಯಾವುದೇ ರೀತಿಯ ತೊಂದರೆಯಾದರೆ ಕಾನೂನು ಪ್ರಕಾರ ಮೂರು ವರ್ಷ ಅಥವಾ ೫ ವರ್ಷ ಜೈಲುಶಿಕ್ಷೆ ಎಂದಿದೆ. ಆದರೆ ನಮ್ಮ ಅರಣ್ಯದ ಒಟ್ಟು ೨೫ ಸಾವಿರ ಎಕರೆ ವಿವಿಧ ಭೂಮಿಯಲ್ಲಿ ಕಲ್ಲನ್ನು ತೋಡಲಾಗುತ್ತಿದೆ, ಇನ್ನೂ ನಮ್ಮ ಅರಣ್ಯ ಸಚಿವರಿಗೆ ಇದರ ಆಳ, ಉದ್ದ, ಅಗಲ ಗೊತ್ತಿಲ್ಲ, ಸಚಿವರೇ ಇದನ್ನು ನೀವು ಕಂಡು ಹಿಡಿಯಬೇಕು. ಅದಕ್ಕೂ ಮುಂಚೆ ನೀವು ಏನು ಕಾನೂನು ಮಾಡಿದಿರಿ ಅದನ್ನು ಒಪ್ಪಲಿಲ್ಲ. ಇದರ ಆಳ ವಿಸ್ತೀರ್ಣ ಎಷ್ಟು ಎಂದು ತರಾತುರಿಯಲ್ಲಿ ಅಳತೆ ಮಾಡಿಕೊಂಡಿದ್ದೀರಿ, ಇದರ ಹಿನ್ನೆಲೆಯಲ್ಲಿ ಏನೇನು ಇದೆ ಎಂಬುದೆಲ್ಲ ಈಚೆಗೆ ಬರಬೇಕು. ಹಿಂದಿನ ಸರ್ಕಾರ ಕಾನೂನು ಮಾಡಲಿಲ್ಲ ಆದರೆ ಕೊಳ್ಳೆಹೋಗುವುದನ್ನು ತಡೆಯುವುದಕ್ಕೂ ಪ್ರಯತ್ನಿಸಲಿಲ್ಲ. ನಾನು ನಿಮ್ಮೊಬ್ಬರನ್ನೇ ದೂಷಿಸುವುದಿಲ್ಲ. ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದ ಸಮಯದಲ್ಲಿ ಅಕ್ರಮವಾಗಿ ಕಲ್ಲು ಸಾಗಾಣಿಕೆ ನಡೆಯುತ್ತಿತ್ತು. ನಾನು ಗಲಾಟೆ ಮಾಡುವುದರಿಂದ ಸರ್ಕಾರಕ್ಕೆ ಲಾಭವಾಗುತ್ತದೆ. ಏನಾಯಿತು ಎಂದರೆ ಏನೂ ಆಗಿಲ್ಲ. ನಾನು ಗಲಾಟೆ ಮಾಡುವುದು, ಸರ್ಕಾರಕ್ಕೆ ಲಾಭ ಆಗುವುದು, ಇಷ್ಟು ಬಿಟ್ಟರೆ ಏನೂ ಆಗಿಲ್ಲ. ಪರಿಣಾಮ ಮಾತ್ರ ಏನೂ ಬರಲಿಲ್ಲ. ಈಗಾಗಲೇ ಅರಣ್ಯದಲ್ಲಿ ವನ್ಯಮೃಗಗಳು ಸಾಯುತ್ತಿವೆ, ತೊಂದರೆಗೆ ಸಿಕ್ಕಿವೆ. ಸಂಜೆ ಆರು ಗಂಟೆಯ ವೇಳೆಯ ಹೊತ್ತಿಗೆ ಬಿಳಿಗಿರಿ ರಂಗನಬೆಟ್ಟದಲ್ಲಿ ಸೂರ್ಯ

---

* ಅಧ್ಯಕ್ಷರ ಆದೇಶದಂತೆ ತೆಗೆಯಲಾಗಿದೆ

ಮುಳುಗುವ ಹೊತ್ತಿನಲ್ಲಿ ನಿಂತರೆ ಅಲ್ಲಿ ಸಿಡಿ ಮದ್ದುಗಳನ್ನು ಹಾಕುತ್ತಾರೆ. ಆ ಸಿಡಿ ಮದ್ದುಗಳು ದಬ ದಬ ಎಂದು ಶಬ್ದ ಮಾಡುತ್ತವೆ. ಆ ಸಿಡಿ ಮದ್ದಿನ ಶಬ್ದಕ್ಕೆ ಪ್ರಾಣಿಗಳು ದಿಕ್ಕೆಟ್ಟು ದಿಕ್ಕೆಟ್ಟು ಈ ಕಾಡನ್ನೇ ಬಿಟ್ಟು ಬೇರೆ ಕಾಡಿಗೆ ಹೋಗುತ್ತವೆ. ಒಂದರಿಂದ ಒಂದು, ಒಂದರಿಂದ ಒಂದು ಈ ರೀತಿ ಸಮಗ್ರವಾಗಿ ನಡೆಯುತ್ತಿವೆ. ಇದರ ಬಗ್ಗೆ ಅರಣ್ಯ ಇಲಾಖೆಯವರು ಪರಿಶೀಲನೆ ನಡೆಸಲಿಲ್ಲ. ಕಂದಾಯ ಇಲಾಖೆಯವರು ಪರಿಶೀಲನೆ ನಡೆಸಲಿಲ್ಲ. ಮುಜರಾಯಿ ಇಲಾಖೆಯವರು ಪರಿಶೀಲನೆಯನ್ನು ನಡೆಸಲಿಲ್ಲ. ಯಾವುದೇ ಪರಿಶೀಲನೆ ಇಲ್ಲದೇ ನೀವು ಏನು ಮಾಡಬೇಕಾಗಿತ್ತು? ಈ ಒತ್ತಡ ನಿಮ್ಮ ಮೇಲೆ ಜನ ತಂದರಲ್ಲ, ಈ ಒತ್ತಡವನ್ನು ಜನ ತಂದಾಗ ತಾವು ಸಮಗ್ರವಾಗಿ ಒಂದು ಚಿಂತನೆಯನ್ನು ಮಾಡಬೇಕಾಗಿತ್ತು. ಏನು ಚಿಂತನೆ ಎಂದರೆ ಈ ಕಲ್ಲುಗಳನ್ನು ಎಷ್ಟು ಕಡೆ ತೆಗೆದಿದ್ದಾರೆ? ಎಷ್ಟು ಗಣಿಗಳಲ್ಲಿ ಕಲ್ಲುಗಳನ್ನು ತೋಡಿದ್ದಾರೆ? ಎಷ್ಟು ಗಣಿಗಳು ಕರ್ನಾಟಕ ರಾಜ್ಯದಲ್ಲಿದೆ? ನಿಮ್ಮ ಇಲಾಖೆಯ ಲೆಕ್ಕದಲ್ಲಿ ಎಷ್ಟು ಗಣಿಗಳು ಸೇರಿದೆ? ಇದುವರೆಗೂ ಒಂದೊಂದು ಗಣಿಯಲ್ಲೂ ಎಷ್ಟು ಚದರಗಜ ಕಲ್ಲುಗಳನ್ನು ತೋಡಿದ್ದಾರೆ? ಎಷ್ಟು ಕಲ್ಲುಗಳನ್ನು ತೆಗೆದು ವಿದೇಶಗಳಿಗೆ ಮಾರಿದ್ದಾರೆ? ಇವೆಲ್ಲವನ್ನೂ ಸಮಗ್ರವಾಗಿ ತಾವು ಚಿಂತನೆ ನಡೆಸಿ ಮತ್ತು ಪರಿಣಿತರನ್ನು ಕರೆದು ಮಾತನಾಡಿ ನೀವು ಯಾವ ರೀತಿ ಈ ಒಂದು ಸಮಸ್ಯೆಯನ್ನು ಬಗೆಹರಿಸಬಹುದು ಎಂದು ಹೇಳಿ ಎಂದು ಈ ಒಂದು ಚಿಂತನೆಗೆ ತಾವು ಬರಬೇಕಾಗಿತ್ತು. ತರಾತುರಿಯಿಂದ ಈ ಒಂದು ಕಾನೂನನ್ನು ಮಾಡುವುದಕ್ಕೆ ಯಾರು ನಿಮಗೆ ಹೇಳಿದವರು? ನಿಮ್ಮ ಮೇಲೆ ಪ್ರಭಾವವನ್ನು ಬೀರಿದಂಥವರು ಯಾರು? ಇದೆಲ್ಲಾ ಹೊರಗೆ ಬರಬೇಕು. ಏಕೆಂದರೆ ನಾನು ಜವಾಬ್ದಾರಿಯನ್ನು ನಿಮ್ಮ ಮೇಲೆ ಹೊರಿಸುತ್ತಿದ್ದೇನೆ. ತಾವು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸಚಿವರಾಗಿದ್ದೀರಿ. ಯಾರ್ಯಾರು ಇದರಲ್ಲಿ ಸೇರಿದ್ದಾರೆ? ನಾನು ನಿಮಗೆ ಒಂದು ಸವಾಲನ್ನು ಹಾಕುತ್ತೇನೆ. ನಿಮ್ಮ ಇಲಾಖೆಯಲ್ಲೇ ಅಧಿಕಾರಿಯಾಗಿದ್ದಂಥ ಮದನಗೋಪಾಲ್ ಎಂಬ ಹೆಸರನ್ನು ತಾವು ಕೇಳಿರಬಹುದು. ಈಗ ಅವರು ಐ.ಎ.ಎಸ್. ಅಧಿಕಾರಿಯಾಗಿ ವಯಸ್ಕರ ಶಿಕ್ಷಣ ಇಲಾಖೆಯಲ್ಲಿದ್ದಾರೆ. ಅವರು ಹಿಂದೆ ನಂಜನಗೂಡಿನಲ್ಲಿ ಉಪ ವಿಭಾಗಾಧಿಕಾರಿಯಾಗಿ ಕೆಲಸವನ್ನು ಮಾಡಿದವರು. ಸುಮಾರು ಎರಡು ವರ್ಷಗಳ ಕೆಲಸವನ್ನು ಮಾಡಿದರು. ಬಹಳ ಚೆನ್ನಾಗಿ ಕೆಲಸ ಮಾಡಿದರು. ಅವರು ಕಲ್ಲಿನ ಕಳ್ಳ ಖದೀಮರನ್ನೆಲ್ಲಾ ಹಿಡಿದರು. ಕಲ್ಲು ಖದೀಮರ ಮೇಲೆ ಮೊಕದ್ದಮೆಗಳನ್ನು ಹಾಕಿದರು. ಅವರನ್ನು ಹೆದರಿಸಿಕೊಂಡು ಹೋದರು. ಗಣಿಗಳನ್ನೆಲ್ಲಾ ಮುತ್ತಿಗೆ ಹಾಕಿದರು. ಗುತ್ತಿಗೆದಾರರುಗಳನ್ನೆಲ್ಲಾ ಓಡಿಸಿದರು. ಮತ್ತು ಸರ್ಕಾರಕ್ಕೂ ಒಂದು ವರದಿಯನ್ನು ಕಳುಹಿಸಿದ್ದಾರೆ ಇದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸರ್ಕಾರಕ್ಕೂ ವರದಿಯನ್ನು ಕಳುಹಿಸಿದ್ದಾರೆ. ಚಾಮರಾಜನಗರ ಯಳಂದೂರು ಮತ್ತು ಕೊಳ್ಳೆಗಾಲದಲ್ಲಿ ಈ ಮೂರು ಪ್ರದೇಶಗಳಲ್ಲಿ ಎಷ್ಟು ಲೂಟಿ ನಡೆದಿದೆ ಎಂದು ಹೇಳಿದ್ದಾರೆ. ಈ ಲೂಟಿಯ ಬಗ್ಗೆ ಸರ್ಕಾರಕ್ಕೆ ಒಂದು ವರದಿಯನ್ನು ಕಳುಹಿಸಿದ್ದಾರೆ. ಆ ವರದಿ ಏನಾಗಿದೆ? ನಿಮ್ಮದೇ ಸರ್ಕಾರ, ಸರ್ಕಾರ ಹೋದಮೇಲೆ ಬೇರೆ ಸರ್ಕಾರ ಬರುತ್ತದೆ. ಅಧಿಕಾರಿಗಳು ಇರುತ್ತಾರೆ ನಿಮ್ಮ ಇಲಾಖೆಯಲ್ಲೇ ಆ ವರದಿ ಇದೆ. ಆ ವರದಿಯನ್ನು ತರಿಸಬೇಕು. ಅಂಥ ಪ್ರಾಮಾಣಿಕ ಒಬ್ಬ ಅಧಿಕಾರಿಯ ಮೇಲೆ ಈ ಗುತ್ತಿಗೆದಾರರೆಲ್ಲರೂ ನಮ್ಮ ಶ್ರೇಷ್ಠ ನ್ಯಾಯಾಲಯದಲ್ಲಿ ಅವರ ವಿರುದ್ಧ ಕೇಸನ್ನು ಹಾಕಿದ್ದಾರೆ. ಬಹುಶಃ ಸರ್ಕಾರ ಆ ಅಧಿಕಾರಿಯ ಪರವಾಗಿ ನಿಂತರೋ ನಿಲ್ಲಲಿಲ್ಲ.

(ಶ್ರೀ ಬಸವರಾಜ ಅಟ್ಟೂರ್ ಅವರು ಅಧ್ಯಕ್ಷ ಪೀಠವನು ಅಲಂಕರಿಸಿದರು)

ಪ್ರಸಾದ್ ಗ್ರಾನೈಟ್ಸ್‌ನ ಒಬ್ಬ ವ್ಯಕ್ತಿ, ಇವೊತ್ತು ಆತನಿಗೆ ಸರ್ಕಾರದಲ್ಲಿ ಪ್ರಭಾವ ಇದೆ.

ಶ್ರೀ ಬಿ ಶಿವಣ್ಣ.— ಆ ಅಧಿಕಾರಿಯನ್ನು ವರ್ಗ ಮಾಡಿದ್ದುದು ಯಾವ ಡೇಟ್ ಎಂದು ಹೇಳುತ್ತೀರಾ?

ಶ್ರೀ ವಾಟಾಳ್ ನಾಗರಾಜ್.— ೧೯೮೫ನೇ ಇಸವಿ ಮಧ್ಯದಲ್ಲಿ ದಿನಾಂಕವನ್ನು ತಮಗೆ ಕೊಡುತ್ತೇನೆ.

ಶ್ರೀ ಬಿ. ಶಿವಣ್ಣ.— ಆಗ ನಾವು ಇರಲಿಲ್ಲ

ಶ್ರೀ ವಾಟಾಳ್ ನಾಗರಾಜ್.—ನಾನು ನಿಮ್ಮ ಮೇಲೆ ಆರೋಪ ಹೊರಿಸುತ್ತಾ ಇಲ್ಲ. ಹಿಂದಿನ ರು ಇದನ್ನು ಹೊರಿಸಿಕೊಂಡಿದ್ದಾರೆ. ನೀವು ಕೊನೆಗೆ ಮೂಟೆ ಹೊತ್ತುಕೊಂಡಿದ್ದೀರ. ಸಮಗ್ರವಾಗಿ ಪಾಪದ ಕೆಲಸ ಮಾಡಿದವರು ನೀವು ಮೊದಲು ಕಂಡೂ ಕಾಣದಂತೆ ಕಳವು ನಡೆಯುತ್ತಿತ್ತು, ಈಗ ಕದಿಯುವುದಕ್ಕೆ ಪರ್ಮಿಷನ್ ಕೊಟ್ಟಿದ್ದೀರಿ ಈಗ ನೀವು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಪತ್ರ ಬರೆದಿದ್ದೀರಿ. ಯಾರ್ಯಾರು ಏನು ಬೇಕಾದರೂ ತೆಗೆದುಕೊಂಡು ಹೋಗಿ ಎಂದು ಗಂಭೀರವಾಗಿ ಪತ್ರ ಬರೆದಿದ್ದೀರಿ. ಹಿಂದಿನವರದೂ

ಒಂದು ಕಥೆ. ತಮ್ಮದೂ ಒಂದು ಕಥೆ. ಅಧ್ಯಕ್ಷರೇ ತಮಗೂ ಗೊತ್ತಿರಬಹುದು, ಅಲಿಬಾಬಾ ಮತ್ತು ೪೦ ಮಕ್ಕಳ ಕಥೆ ಹಾಗೆಯೇ ಈ ಕಥೆ ಹಿಂದಿನಿಂದ ನಡೆದುಕೊಂಡು ಬಂದಿದೆ. ಖಾಸಿಮ್ ಮತ್ತು ಅವನ ತಮ್ಮ ಅಕ್ರಮ್ ಕಥೆ ಹೇಗೆ ನಡೆದಿದೆಯೋ ಹಾಗೆಯೇ ಇದೂ ಕೂಡ ನಡೆದುಕೊಂಡು ಬಂದಿದೆ ಹೊಸದು ಯಾವುದೂ ಇಲ್ಲ. ಪ್ರಸಾದ್ ಗ್ರಾನೈಟ್ಸ್‌ನವರು ಎಳಂದೂರಿಗೆ ಹೋಗಿ, ನಾನು ಎಳಂದೂರಿನ ವಾಸಿ ನನಗೆ ವ್ಯವಸಾಯಕ್ಕೆ ಜಮೀನು ಬೇಕು ಎಂದು ಸುಳ್ಳು ಹೇಳಿ, ಸತ್ಯಕ್ಕೆ ದೂರವಾದ ವಿಷಯವನ್ನು ಹೇಳಿ ಪ್ರಮಾಣ ಪತ್ರವನ್ನು ಎಳಂದೂರಿನ ತಹಶೀಲ್ದಾರ್‌ರವರಿಂದ ಪಡೆದರು. ವ್ಯವಸಾಯಕ್ಕೆ ಯೋಗ್ಯವಾದ ಜಾಗವನ್ನು ಪಡೆದು ಕನಿಷ್ಟ ೫೦ರಿಂದ ೧೦೦ ಕೋಟಿವರೆಗೆ ಕಲ್ಲನ್ನು ತೆಗೆದಿದ್ದಾರೆ, ಇದನ್ನು ಶ್ರೀ ಮದನ ಗೋಪಾಲ್‌ರವರು ಪತ್ತೆ ಮಾಡಿ ಅವರ ಮೇಲೆ ಪೋಲೀಸ್ ಕೇಸ್ ಹಾಕಬೇಕು ಎಂದು ತಹಶೀಲ್ದಾರ್‌ರವರಿಗೆ ಹೇಳಿದರು. ತಹಶೀಲ್ದಾರ್‌ರವರು ಪೋಲೀಸ್ ಕೇಸ್ ಹಾಕಿದರು. ಕೇಸ್ ಪೋಲೀಸ್ ಠಾಣೆ ತಲುಪಿತು, ಮುಂದೆ ಏನು ಆಯಿತು? ಸುಳ್ಳು ಪ್ರಮಾಣ ಪತ್ರವನ್ನು ಕೊಟ್ಟಿರುವುದಕ್ಕಾಗಿ ನನ್ನ ಪ್ರಕಾರ ಜೈಲಿಗೆ ಕಳಿಸುತ್ತಾರೆ ಎಂದು ತಿಳಿದುಕೊಂಡಿದ್ದೆ. ಅವನನ್ನು ಜೈಲಿಗೆ ಕಳಿಸುವ ಬದಲು ಶ್ರೀ ಮದನಗೋಪಾಲ್ ಅವರನ್ನೇ ತೆಗೆದು ಹಾಕಿದರು. ರಾತ್ರೋರಾತ್ರಿ ಅವರನ್ನು ಉಳಿಸಲಿಲ್ಲ ಅವರನ್ನು ಓಡಿಸಲೇ ಬೇಕು ಎಂದು ಹೇಳಿ ಕಲ್ಲು ಖದೀಮರ ಒತ್ತಾಯಕ್ಕೆ ಸರ್ಕಾರ ಮಣಿದು ಅವರನ್ನು ತೆಗೆದು ಕೆಲಸಕ್ಕೆ ಬಾರದಿರುವಂತಹ ಒಂದು ಪೋಸ್ಟಿಗೆ ಹಾಕಿದರು. ನಿನಗೆ ಯಾಕೆ ಬೇಕು ಇವೆಲ್ಲಾ ಹುಡುಗಾಟ. ನೀನು ಗಂಭೀರವಾಗಿ ಇರಬೇಕು ಎಂದು ಹೇಳಿ ಎತ್ತಿ ಹಾಕಿದರು. ಕಲ್ಲು ಕದ್ದವರ ಮೇಲೆ, ದನ ಕದ್ದವರ ಮೇಲೆ ಕೇಸ್ ಹಾಕಿದ, ಇಂತಹ ಪ್ರಕರಣವನ್ನು ಪತ್ತೆ ಮಾಡಿದ ಅವರಿಗೆ ಅಭಿನಂದನೆಗಳನ್ನು ಸರ್ಕಾರ ಸಲ್ಲಿಸಬೇಕಿತ್ತು. ಸರ್ಕಾರವವರು ಅವರನ್ನು ಕರೆದರು. ಏನು ಹುಡುಗಾಟ ನಿಮ್ಮದು ? ಹೊಂದಿಕೊಂಡು ಹೋಗಬೇಕು ಎಂದು ಹೇಳಿ ಪಾಪದ ಅವರನ್ನು ವಯಸ್ಕರ ಶಿಕ್ಷಣ ಸಮಿತಿಗೆ ಹಾಕಿದರು. ಆದ್ದರಿಂದ ನಾನು ತಮಗೆ ಒಂದು ಸಲಹೆ ಕೊಡುತ್ತೇನೆ. ತಾವು ಮಾಡುವುದಾದರೆ, ಅಥವಾ ತಮಗೆ ಪ್ರಾಮಾಣಿಕತೆ ಇದ್ದರೆ. ಈಗ ತಾವು ಏನು ಆಜ್ಞೆಯನ್ನು ಹೊರಡಿಸಿದ್ದೀರಿ ೧೫ ದಿವಸಗಳ ಕಾಲ ಅದನ್ನು ತಡೆ ಹಿಡಿಯಿರಿ, ಪ್ರಾಮಾಣಿಕತೆ ಇದ್ದರೆ ತಡೆ ಹಿಡಿಯಬೇಕು, ಇಲ್ಲದಿದ್ದರೆ ಇಟ್ಟುಬಿಡಿ. ತಾವು ಮದನ ಗೋಪಾಲ್ ಅವರನ್ನು ಕರೆಯಿಸಿ ಚರ್ಚೆ ಮಾಡಿ...

ಶ್ರೀ ಜಿ. ಎಸ್. ಶಿವನಂಜಪ್ಪ.— ನೀವು ಪದೇ ಪದೇ ಪ್ರಾಮಾಣಿಕತೆ ಇದ್ದರೆ ಎಂದು ಉಪಯೋಗಿಸುವುದು ಸರಿಯೇ ?

ಶ್ರೀ ವಾಟಾಳ್ ನಾಗರಾಜ್.— ಪ್ರಾಮಾಣಿಕತೆ ಇದ್ದರೆ ಎಂದು ಹೇಳಿದೆ, ಇಲ್ಲ ಎಂದು ಹೇಳಲೇ ?

ಶ್ರೀ ಜಿ. ಎಸ್. ಶಿವನಂಜಪ್ಪ.— ಹೀಗೆ ಏಕಾಏಕಿ ಆರೋಪ ಮಾಡುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್.— ನಾವು ನೀವು ಇಬ್ಬರೂ ಕೂಡಿ ಮಾತನಾಡೋಣ.

ಶ್ರೀ ಜಿ. ಎಸ್. ಶಿವನಂಜಪ್ಪ.— ಸಂಧಾನದ ಮಾತು ಹೇಳಿದ್ದೀರಿ. ಅವರ ಜೊತೆ ಹೊಂದಿಕೊಂಡು ಹೋಗಬೇಕೆಂದು ಹೇಳಿದಿರಿ. ನಿಮಗೆ ಯಾರು ಇನ್‌ಫರ್‌ಮೇಷನ್ ಕೊಟ್ಟರು.

ಶ್ರೀ ವಾಟಾಳ್ ನಾಗರಾಜ್.— ತಮ್ಮ ಪ್ರಶ್ನೆ ನನಗೆ ಅರ್ಥ ಆಯಿತು...

ಶ್ರೀ ಜಿ. ಎಸ್. ಶಿವನಂಜಪ್ಪ.— ನನಗೆ ಏನು ಸಂಶಯ ಅಂದರೆ ವಾಟಾಳ್ ಅವರೂ ಇದರಲ್ಲಿ ಸೇರಿದ್ದಾರೆಯೋ ಏನೋ ಎಂದು...

ಶ್ರೀ ವಾಟಾಳ್ ನಾಗರಾಜ್.— ನಾನು ಯಾರು ಹೇಗೆ ಎಂದು ಇಡೀ ನಾಡಿನ ಜನಕ್ಕೆ ಗೊತ್ತು. ರವಿ ಕಾಣದನ್ನು ಕವಿ ಕಂಡ ಎಂದು ಗಾದೆ ಇಲ್ಲವೇ ? ಆದ್ದರಿಂದ ಸಂಶಯಕ್ಕೆ ಕಾರಣ ಏನೂ ಇಲ್ಲ...

೧-೧೫ ಪಿ.ಎಂ.

ಕಾಂಗ್ರೆಸ್‌ನವರು ಅಂದರೆ ಈ ದೇಶದಲ್ಲಿ ಸರ್ವಜ್ಞರು ಇದ್ದ ಹಾಗೆ. ನೀವು ಕಾಣದೇ ಇದ್ದದ್ದನ್ನು ಯಾರೂ ಕಾಣುವಹಾಗಿಲ್ಲ. ಸುಮ್ಮನೆ ನಾವು ಬಂದು ಕುಳಿತಿರುವುದು. ಸರ್ಕಾರ ನಡೆಸುವವರು ನೀವು, ಅಧಿಕಾರ ಮಾಡುವವರು ನೀವು ಮಾನ್ಯ ಅಧ್ಯಕ್ಷರೆ, ಮದನಗೋಪಾಲ್‌ರವರ ವರ್ಗ ಇಲ್ಲಿಗೆ ಆಯಿತು. ಕೊನೆಗೆ ಕೇಸ್ ಏನಾಯಿತು ಎನ್ನುವುದು ತಮ್ಮ ಗಮನಕ್ಕೆ ಬರಬೇಕು. ಸುಮಾರು ಮೂರು ವರ್ಷ ಆ ಮನುಷ್ಯನನ್ನು ಸ್ಟೇಷನ್‌ಗೆ ಕರೆದುಕೊಂಡು ಬರಲಿಲ್ಲ. ಮಾನ್ಯ

ಸಚಿವರಿಗೆ ನಾನು ಹೇಳುತ್ತೇನೆ, ತಾವು ಮಾಡಿದಿರಿ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನೀವು ಮಾಡಿದ್ದು ದು ಬೇರೆ, ಅವರು ಮಾಡಿದ್ದೇ ಬೇರೆ, ಸ್ಟೇಷನ್‌ಗೆ ಅವರನ್ನು ಕರೆದುಕೊಂಡು ಬರಲೇ ಇಲ್ಲ. ಸ್ಟೇಷನ್ನೇ ಅವರ ಮನೆಗೆ ಬಂದುಬಿಟ್ಟಿತು. ಯಳಂದೂರಿನಿಂದ ಇಡೀ ಸ್ಟೇಷನ್ನೇ ಅವರ ಮನೆಗೆ ಬಂದು ಬಿಟ್ಟಿತು, ಬಂದು ದಸ್ತಗಿರಿ ಮಾಡಿದ ಹಾಗೂ ಬರೆದರು, ಬಿಟ್ಟ ಹಾಗೂ ಬರೆದರು, ಅವರ ಸಹಿ ತೆಗೆದುಕೊಂಡರು, ಪುಸ್ತಕಗಳನ್ನು ಶಿರುಗಿ ತೆಗೆದುಕೊಂಡು ಹೋದರು ಅಲ್ಲಿಗೆ ಮುಗಿಯಿತು ಇವತ್ತು ಕೇಸ್ ಏನಾಗಿದೆ ? ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ, ಇದು ನಾವು ಹಾಕಿರತಕ್ಕಂಥ ಕೇಸ್ ಅಲ್ಲ. ಒಬ್ಬ ಐ. ಎ. ಎಸ್. ಅಧಿಕಾರಿ ಮಟ್ಟದವರು ತನಿಖೆ ನಡೆಸಿ ಒಂದು ತಾಲ್ಲೂಕಿನ ತಹಶೀಲ್ದಾರರು ಪೋಲೀಸ್ ಸ್ಟೇಷನ್‌ಗೆ ಕೇಸನ್ನು ಕೊಟ್ಟಿರತಕ್ಕಂಥಾದು ಆದರೆ ಇವೊತ್ತು ಕೇಸ್ ಏನಾಯಿತು ಎಂದು ತಾವು ಕೇಳಿದರೆ ಈ ಸಭೆಯಲ್ಲಿ ಆಶ್ಚರ್ಯ ಪಡಬಹುದು, ದಿಗ್ಭ್ರಮೆ ವ್ಯಕ್ತಪಡಿಸಬಹುದು, ವ್ಯಕ್ತಪಡಿಸುತ್ತಾರೋ ಇಲ್ಲವೊ ನನಗೆ ಗೊತ್ತಿಲ್ಲ. ಬಹುಶಃ ನಮ್ಮ ನಂಜುಂಡಸ್ವಾಮಿಯವರು ಒಪ್ಪುತ್ತಾರೆ, ಏನು ನಡೆದಿದೆ ಎನ್ನುವುದು ಅವರಿಗೆ ಗೊತ್ತಿದೆ. ‘ಬಿ’ ರಿಪೋರ್ಟ್ ಹಾಕಿದರು. ಯಾರನ್ನು ಸೆಂಟ್ರಲ್ ಜೈಲಿಗೆ ಕಳಿಸಬೇಕಾಗಿತ್ತೋ. ಸೆಂಟ್ರಲ್ ಜೈಲಿನಲ್ಲಿ ಕೈಗೆ ಬಳೆ ತೊಡಿಸಿ ಮಾಡಬೇಕಾಗಿತ್ತು. ಕೊಲೆ ಮಾಡಿರುವವರಿಗಿಂತ, ಕೊಲೆಗಿಂತ ಅಪರಾಧ ಈ ಕಲ್ಲು ತೆಗೆಯುವುದು. ಕೊಲೆ ಮಾಡುವುದು ಒಂದು ಸಂದರ್ಭ. ಅಕಸ್ಮಾತ್ ಯಾವುದೋ ವಿಚಾರದಲ್ಲಿ ಆಗಿರುತ್ತದೆ. ಇದು ಅದಕ್ಕಿಂತಲೂ ಈ ನಾಡನ್ನು ಕಂಡು ನೋಡಿ ಮಾಡತಕ್ಕ ಕೆಲಸ. ಈ ಕೇಸ್ ಏನಾಯಿತು ಸ್ವಾಮಿ.

ಶ್ರೀ ಬಿ. ಶಿವಣ್ಣ.— ಯಾವ ಕಾಲಕ್ಕೆ ಮದನಗೋಪಾಲ್‌ರವರ ಇನ್ಸಿಡೆಂಟ್ ಆಯಿತು ಎಂದು ತಾವು ಹೇಳಿದಿರಿ ಆಗ ಕ್ಲಿಯರ್ ಪಾಲಿಸಿ ಸರ್ಕಾರದ ಮುಂದೆ ಇರಲಿಲ್ಲ. ಈಗ ನಾನು ಏನು ಹೇಳುತ್ತೇನೆಂದರೆ, ಇರ್ರೆಗ್ಯುಲರ್, ಇಲ್ಲೀಗಲ್ ಕ್ವಾರಿಯಿಂಗ್ ಏನಿದೆ ಅದರಲ್ಲಿ ಡಿಸಿಪ್ಲಿನ್ ತರುವ ಸಲುವಾಗಿ ನೋಟಿಫಿಕೇಷನ್ ತಂದಿದ್ದೇವೆ, ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್.— ನೀವು ನೋಟಿಫಿಕೇಷನ್ ತಂದಿದ್ದೀರಿ. ನೀವು ಯಾವ ಕಡೆಯಿಂದ ಸುತ್ತಿ ಸಮರ್ಥನೆ ಮಾಡಿಕೊಂಡರೂ ಆ ಒಂದು ಪಾಪದ ಲೇಪನದಿಂದ, ಪಾಪದ ವಾಸನೆಯಿಂದ ತಪ್ಪಿಸಿಕೊಳ್ಳುವುದಕ್ಕೆ ನಿಮಗೆ ಸಾಧ್ಯವಿಲ್ಲ. ನೀವು ತಂದಿರುವುದಕ್ಕೆ ನಾನು ಆಮೇಲೆ ಬರುತ್ತೇನೆ. ನೀವು ಯಾರ್ಯಾರಿಗೆ ಕೊಡಬೇಕು ಎಂದು ನೋಟಿಫಿಕೇಷನ್ ತಂದಿದ್ದೀರಲ್ಲ ಅದನ್ನು ಆಮೇಲೆ ಹೇಳುತ್ತೇನೆ; ಅದಕ್ಕೆ ಆ ಮೇಲೆ ಬರುತ್ತೇನೆ. ಈಗ ತಾವು ಮದನಗೋಪಾಲ್‌ರವರನ್ನು ಕರೆಯಿಸಿ. ಆಗ ಮಾನ್ಯ ಶಿವನಂಜಪ್ಪನವರು ನಮ್ಮ ಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡುತ್ತೀರ ಎಂದು ಕೇಳಿದರು. ನಾನೇನೊ ಹೇಳುವುದಕ್ಕೆ ಹೋಗುವುದಿಲ್ಲ. ದಯಮಾಡಿ ಈ ಸಭೆಯ ಮೂಲಕ...

ಶ್ರೀ ಬಿ ಶಿವಣ್ಣ.— ನಾನು ನಿಮಗೂ ಕೂಡ ಮಾತನಾಡಿ, ಡಿಸ್ಕಸ್ಸ್ ಮಾಡಿ ಎಂದು ಹೇಳಿದೆ, ನೀವು ಬರಲೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ನನ್ನನ್ನು ಯಾವಾಗ ಕರೆದಿರಿ ಹೇಳಿ, ನೋಟಿಫೈ ಆದ ಮೇಲೆ ಕರೆದಿರಿ. ನೋಟಿಫೈ ಆದ ಮೇಲೆಮೂರನೇ ಮಹಡಿಯಿಂದ ರಸ್ತೆಯಲ್ಲಿ ನೀವು ಲವಲವಿಕೆಯಿಂದ ಬರುತ್ತಾ ಇದ್ದಿರಿ. ನಾನು ನಿಲ್ಲಿಸಿದೆ. ಏನು ಶಿವಣ್ಣನವರೆ ಇಷ್ಟು ಸಂತೋಷವಾಗಿದ್ದೀರಿ ಎಂದು. ನನಗೆ ಗೊತ್ತಿತ್ತು ನಿಮ್ಮ ಸಂತೋಷ. ನನಗೆ ದುಃಖವಾಯಿತು, ನಾನೇನು ನಿಮ್ಮನ್ನು ಕೇಳಿದೆ ಅಂದರೆ, ದಯಮಾಡಿ ಈಗ ಕೊಟ್ಟಿರತಕ್ಕಂಥ ನಿಮ್ಮ ಆಜ್ಞೆಯನ್ನು ನಿಲ್ಲಿಸುವುದಾದರೆ ನಾನು ನಿಮ್ಮ ಹತ್ತಿರ ಬಂದು ಚರ್ಚೆಮಾಡುತ್ತೇನೆ ಎಂದು ಹೇಳಿದೆ. ಆಜ್ಞೆ ಇರಲಿ ಚರ್ಚೆಮಾಡು ಎಂದು ನೀವು ಹೇಳಿದಿರಿ. ಅದು ಹೇಗೆ ಆಗುತ್ತದೆ. ? ಬಸ್ ಕಳಿಸಿಬಿಟ್ಟು ಸ್ಟ್ಯಾಂಡ್‌ನಲ್ಲಿ ನಿಂತುಕೊ ಎಂದು ಹೇಳಿದಹಾಗೆ ಆಯಿತು.

ಶ್ರೀ ಬಿ. ಶಿವಣ್ಣ.— ಮಾನ್ಯ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದಿರುವುದು ಗೊತ್ತಿದೆ. ಅವರು ಪತ್ರ ಬರೆದರು, ತಾವು ಸ್ವಲ್ಪ ಕಷ್ಟಪಟ್ಟು ಬಂದು ಸಲಹೆಗಳನ್ನು ಮಾಡಿದ್ದರೆ ಸ್ವಲ್ಪ ಹೆಚ್ಚು ಕಡಿಮೆಯಾಗುತ್ತಿತ್ತು.

ಶ್ರೀ ವಾಟಾಳ್ ನಾಗರಾಜ್.— ನಾನು ಮುಖ್ಯ ಮಂತ್ರಿಗಳಿಗೂ ಎರಡು ಪುಟ ಪತ್ರ ಬರೆದೆ, ಇವರಿಗೂ ಎರಡು ಪುಟ ಬರೆದೆ. ಮತ್ತೆ ಮಾನ್ಯ ಹಣಕಾಸಿನ ಸಚಿವರಿಗೂ ಎರಡು ಪುಟ ಪತ್ರ ಬರೆದೆ. ಅವರಿಂದ ಎರಡು ಲೈನ್ ಬಂತು. ‘‘ನಿಮ್ಮ ಪತ್ರ ನಮಗೆ ತಲುಪಿದೆ. ಇದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳಿಸಿದ್ದೇನೆ’’ ಎಂದು ನೆಗೆದುಬಿದ್ದು ಹೋಯಿತಲ್ಲ, ಅದರ ಕಥೆ ಮುಗಿದು ಹೋಯಿತಲ್ಲ ನಮಗೆ ಪರಿಹಾರ ಸಿಕ್ಕಿತಲ್ಲ. ನಾನು ಕಷ್ಟಪಟ್ಟು ಅಲ್ಲಿ ಏನೇನು ನಡೆದಿದೆ ಎಂದು ಎರಡು ಪುಟ

ಬರೆದು ಕಳಿಸಿಕೊಟ್ಟೆ. ಮತ್ತೆ ಇವರು ಆಜ್ಞೆಯನ್ನು ಹೊರಡಿಸಿದ್ದಾರೆ. ಈ ಆಜ್ಞೆ ಮುಖ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಎಂದು ನಾನು ಅವರಿಗೆ ಸ್ವಾಮಿ, ಲೂಟಿಯಾಗುತ್ತಿದೆ. ಅನ್ಯಾಯವಾಗುತ್ತಿದೆ ಎಂದು. ತಕ್ಷಣ ಕಾಗದ ಬರೆದೆ. ಸ್ವಾಮಿ, ಲೂಟಿಯಾಗುತ್ತಿದೆ, ಅನ್ಯಾಯವಾಗುತ್ತಿದೆ, ಕಲ್ಲುಗಳು ಹೋಗುತ್ತಿದೆ. ಪತ್ರಕರ್ತರುಗಳನ್ನು ಕರೆದುಕೊಂಡು ಹೋಗಿ ಬರುತ್ತಿರುವಾಗ, ಅವರಿಗೆ ಒಂದೊಂದು ಕಾಪಿ ಕೊಟ್ಟಿದ್ದೇನೆ. ನಾನು ಈ ಬಗ್ಗೆ ಮುಖ್ಯಮಂತ್ರಿಗಳಿಗೆ ಕಾಗದ ಬರೆದಿದ್ದೇನೆ. ಎಂದು ತೋರಿಸಿದ್ದೇನೆ. ಅವರೇ ಸಾಕ್ಷಿ. ಈ ರಾಜ್ಯದಲ್ಲಿ ಪತ್ರಕರ್ತರುಗಳು ಈ ಪ್ರಕರಣವನ್ನು ಪ್ರಚಾರ ಮಾಡದೇ ಇದ್ದರೆ, ಅದು ಹೊರಗೆ ಬರುತ್ತಾ ಇರಲಿಲ್ಲ. ನಮ್ಮನ್ನು ಪಾತಾಳಕ್ಕೆ ತುಳಿಯುತ್ತಿದ್ದರು. ಪತ್ರಕರ್ತರನ್ನು ಕರೆದುಕೊಂಡು ಹೋಗಿದ್ದೇನೆ, ಅವರೇ ಸಾಕ್ಷಿ. ಪತ್ರಕರ್ತರು ಕಲ್ಲುಗಣಿಗಳನ್ನು ನೋಡಿಕೊಂಡು ಬಂದಿದ್ದಾರೆ. ಈ ಸಭೆಯಲ್ಲಿ ನಾನು ನಿಮ್ಮನ್ನು ಕೇಳುತ್ತಿದ್ದೇನೆ. ನೀವು ನನ್ನ ಜೊತೆಯಲ್ಲಿ ಬರುವುದಾದರೆ ಒಂದು ಕಂಡಿಷನ್, ಬರುವುದಕ್ಕೆ ಮುಂಚೆ ನೀವು ಈಗ ಏನೊಂದು ಆಜ್ಞೆ ಮಾಡಿದ್ದೀರಿ, ಅದನ್ನು ತಾತ್ಕಾಲಿಕವಾಗಿ ತಡೆಹಿಡಿಯಬೇಕು. ನಿಮ್ಮ ಇಲಾಖೆಯವರಿಗೆ ವಾಟಾಳ್ ನಾಗರಾಜ್ ಅವರ ಜೊತೆಯಲ್ಲಿ ಮಾತುಕತೆ ಮಾಡಿದ ನಂತರ ಮಾಡುತ್ತೇನೆ ಎನ್ನುವ ಧೈರ್ಯವನ್ನು ತೋರಿಸಿ, ಪ್ರಾಮಾಣಿಕತೆಯನ್ನು ತೋರಿಸಿ. ಇವತ್ತು ಶುಕ್ರವಾರ, ನಾಳೆ ಶನಿವಾರ ನೀವು ನಾವು ಹೋಗೋಣ. ಎಷ್ಟು ಅನ್ಯಾಯವಾಗಿದೆ ಎಂಬುದನ್ನು ನೋಡುವಿರಂತೆ. ತಾವು ಮದನ್‌ಗೋಪಾಲ್ ಅವರನ್ನು ಕರೆಯಿಸಿ, ತಾವು ಮದನ್‌ಗೋಪಾಲ್ ಅವರನ್ನು ಬೆದರಿಸುವುದು ಹೆದರಿಸುವುದು ಸರಿಯಲ್ಲ ಸರ್ಕಾರ ಅಧಿಕಾರಿಗಳ ಮೇಲೆ ಪ್ರಭಾವ ಬೀರಿದರೆ, ನಮಗೆ ಏಕೆ ಬೇಕು; ಯಾರನ್ನು ಕಟ್ಟಿಕೊಂಡು ನಮಗೇನು ಆಗಬೇಕು ಎಂದು ಅವರೂ ಸುಮ್ಮನಾಗುತ್ತಾರೆ. ಪ್ರಾಮಾಣಿಕವಾಗಿ ಏನು ನಡೆದಿದೆ ಎನ್ನುವುದನ್ನು ಹೇಳಬೇಕು. ಮದನಗೋಪಾಲ್‌ರವರು ವರದಿ ಕೊಡಲಿ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ಪ್ರಾಮಾಣಿಕತೆ ಇದೆಯೋ; ಸರ್ಕಾರಕ್ಕೆ ಅಂಥ ಒಂದು ಪ್ರಾಮಾಣಿಕತೆ ಇದೆಯೋ ಅವರನ್ನು ಟ್ರಾನ್ಸ್‌ಫರ್ ಮಾಡಿದುದ್ದು ಹಿಂದಿನ ಸರ್ಕಾರವೇ.

ಶ್ರೀ ಪಿ. ಜಿ. ಆರ್. ಸಿಂಧ್ಯ —೨೭ಮೇ ನಲ್ಲಿ ಟ್ರಾನ್ಸ್‌ಫರ್ ಮಾಡಿ ನೋಟಿಫಿಕೇಷನ್ ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಟ್ರಾನ್ಸ್‌ಫರ್ ಏತಕ್ಕೆ ಮಾಡಿದರು ? ಗಣಿಗೋಸ್ಕರ ಮಾಡಿದ್ದುದು. ಮಾನ್ಯ ರಾಚಯ್ಯನವರು ಅವರನ್ನು ಟ್ರಾನ್ಸ್‌ಫರ್ ಮಾಡಬೇಡಿ ಎಂದು ಬಡಕೊಂಡರು.

ಶ್ರೀ ವಾಟಾಳ್ ನಾಗರಾಜ್. — ಮಾನ್ಯ ಅಧ್ಯಕ್ಷರೆ, ನಾನು ಯಾರ ಮೇಲೂ ದೋಷಾರೋಪಣೆ ಮಾಡುತ್ತಿಲ್ಲ. ಪ್ರಾಮಾಣಿಕ ಉದ್ದೇಶದಿಂದ ಕಲ್ಲು ಲೂಟಿಯಾಗುವ ವಿಚಾರವನ್ನು ಈ ಸಭೆಯಲ್ಲಿ ತಂದಿದ್ದೇನೆ. ನಮಗೂ ಕೂಡ ನಿಸರ್ಗದ ಬಗ್ಗೆ, ಅರಣ್ಯದ ಬಗ್ಗೆ, ನಾಡಿನ ಬಗ್ಗೆ, ನಾಡಿನ ಸಂಪತ್ತಿನ ಬಗ್ಗೆ, ನಾಡಿನ ಸೌಂದರ್ಯದ ಬಗ್ಗೆ ಕಾಳಜಿ ಇದೆ.

ಶ್ರೀ ಬಿ. ಶಿವಣ್ಣ.—ಅರಣ್ಯ ನಮ್ಮ ಕಂಟ್ರೋಲ್‌ನಲ್ಲಿ ಬರುವುದಿಲ್ಲ. ನಾವು ಏನು ಮಾಡಬೇಕಾದರೂ ಭಾರತ ಸರ್ಕಾರದ ಅಪ್ರೂವಲ್ ಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಶಿವಣ್ಣನವರ ಪರಿಸ್ಥಿತಿ ಶೋಚನೀಯ.

ಶ್ರೀ ಬಿ. ಶಿವಣ್ಣ.—ಹಾಗೆನಿಲ್ಲ. ಸರಿ ಇದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಸರಿಯಿದ್ದಾರೆ ....

ಶ್ರೀ ಕಾಗೋಡು ತಿಮ್ಮಪ್ಪ.—ಮದನಗೋಪಾಲ್ ಅವರನ್ನು ಟ್ರಾನ್ಸ್‌ಫರ್ ಯಾರು ಮಾಡಿದರು ಫಿರ್ಯಾದೆ ಕೊಟ್ಟಿದ್ದರು (ಬಿ) ರಿಪೋರ್ಟ್ ಹಾಕಿದರು ಯಾರು ಹಾಕಿದ್ದರು. ಈ ಸರ್ಕಾರ ಬಂದ ಮೇಲೆ ಹಾಕಿದ್ದಾರೆಯೆ ? ಅದಕ್ಕೂ ಮುಂಚೆ ಹಾಕಿದ್ದಾರೆಯೆ ?

ಶ್ರೀ ವಾಟಾಳ್ ನಾಗರಾಜ್.—ಇದು ಎರಡು ಮುಖ. ಖೋಟಾ ನಾಣ್ಯದ ಎರಡು ಮುಖ. ನನಗೆ ಈ ಕಡೆ ಕುಳಿತುಕೊಂಡಿರುವವರು ವಿರೋಧ ಮಾಡಬಾರದು ಆ ಕಡೆ ಇರುವವರು ವಿರೋಧ ಮಾಡಬಾರದು ನೀವು ಬಹುತೇಕ ತೇಯಿದು ಸವಕಲಾಗಿ ಹೋಗಿರುವವರು. ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ನನ್ನ ವಿಚಾರ ಅರ್ಥವಾಗುವುದಿಲ್ಲ ಅಂದರೆ ಹೇಗೆ ?

ಶ್ರೀ ಕಾಗೋಡು ತಿಮ್ಮಪ್ಪ.—ತಾರತಮ್ಯ ಇರಬಾರದು.

ಶ್ರೀ ಎಂ. ಪಿ. ವೆಂಕಟೇಶ್.—ಅವರದ್ದೂ ಹೇಳಿ, ಇವರದೂ ವಿವರ ಹೇಳಿ ಎಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ದರೋಡೆಯಲ್ಲಿ ಯಾರೂ ಹಿಂದುಮುಂದು ನೋಡಿಲ್ಲ. ಅವರು ಸ್ವಲ್ಪ ಕದ್ದು ದರೋಡೆ ಮಾಡುತ್ತಿದ್ದರು, ಇವರು ಬಹಿರಂಗವಾಗಿ ದರೋಡೆಗೆ ಇಳಿದಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ನಮ್ಮಲ್ಲಿ ಲ್ಯಾಂಡ್ ರೆವನ್ಯೂ ಆಕ್ಟ್ ಇದೆ. ನನಗೆ ತಿಳಿದ ಪ್ರಕಾರ ರೆವಿನ್ಯೂ ಆಕ್ಟ್‌ನಲ್ಲಿ ಖಾಸಗೀ ಭೂಮಿ ಇದ್ದರೂ ಅದರಲ್ಲಿರತಕ್ಕ ವಜ್ರ, ವೈಢೂರ್ಯ, ಗಂಧ ಮತ್ತಿತರ ಸಂಪತ್ತು ಸರ್ಕಾರಕ್ಕೆ ಸೇರಿದ್ದೆಂದು ಆಕ್ಟ್‌ನಲ್ಲಿದೆ. ಸಾಗುವಳಿ ಚೀಟಿ ಕೊಡುವಾಗ ಕೂಡ ಅದರಲ್ಲಿ ಸರ್ಕಾರಕ್ಕೆ ಸೇರಿದ್ದೆಂದು ಕಂಡೀಷನ್ ಹಾಕಿರುತ್ತೇವೆ. ಆದ್ದರಿಂದ ನಾನು ಇದನ್ನು ಏತಕ್ಕೆ ಹೇಳಿದೆ ಆದರೆ ಒಬ್ಬ ತಹಶೀಲ್ದಾರ್‌ರು ಫಿರ್ಯಾದಿ ಕೊಡಬೇಕಾದರೆ ಯಾವುದಾದರೂ ಕಾನೂನು ಉಲ್ಲಂಘನೆ ಆಗಿರಬೇಕು ತಾನೆ. ನಿಜವಾಗಿ ಅವರು ಹೇಳಿರುವ ಪ್ರಕಾರ ಕಾನೂನು ಉಲ್ಲಂಘನೆ ಆಗಿ ಆ ಪ್ರಕಾರ ಕೇಸನ್ನು ರಿಜಿಸ್ಟರು ಮಾಡಿ ತದನಂತರ ತನಿಖೆಯಲ್ಲಿ ಅಪರಾಧ ನಡೆದಿಲ್ಲ ಎಂದು ಹೇಳಿದರೆ, ಒಂದು ವೇಳೆ ಮುಚ್ಚಿ ಹಾಕಬೇಕು ಎಂದು ಮಾಡಲಿಕ್ಕೂ ಸಾಧ್ಯ. ಈಗ ತಾವೇ ಅಪರಾಧಿ ಮನೆಗೇ ಪೋಲೀಸ್ ಸ್ಟೇಷನ್‌ಹೋಗಿತ್ತು ಎಂದು ಹೇಳಿದಿರಿ. ಅವರು ಫಿರ್ಯಾದಿ ಪ್ರಕಾರ ಮಾಡಿದಂಥ ಆಪಾದನೆ ಬದಲಾವಣೆ ಆಗಿತ್ತೋ ಅಥವಾ ಆಪಾದನೆ ಹಾಗಿಯೇ ಇತ್ತೋ ಎಂದು ತಿಳಿದುಕೊಳ್ಳುವ ಉದ್ದೇಶದಿಂದ ಕೇಳಿದೆ. ಇದೆಲ್ಲಾ ಮುಂದೆ ಏನು ನಡೆಯಿತು ಎಂದು ಕೇಳಿದ್ದುದು.

ಶ್ರೀ ವಾಟಾಳ್ ನಾಗರಾಜ್.—ವ್ಯವಸಾಯದ ಭೂಮಿಯಲ್ಲಿರತಕ್ಕ ಖನಿಜಗಳು ಅವು ಸರ್ಕಾರದ ಸ್ವತ್ತು. ವ್ಯವಸಾಯಕ್ಕೆ ತೆಗೆದುಕೊಂಡ ಭೂಮಿಯನ್ನು ಬೇರೆ ರೂಪದಲ್ಲಿ ಉಪಯೋಗಿಸಿ ಖನಿಜವನ್ನು ಕಲ್ಲನ್ನು ತೆಗೆದು ವಿದೇಶಕ್ಕೆ ಮಾರಿರತಕ್ಕದ್ದು ಅವರಿಗೆ ಗೊತ್ತಾದಾಗಲೇ, ಅವರಮೇಲೆ ಕೇಸ್ ದಾಖಲೆ ಮಾಡಿದ್ದುದು.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಅಲ್ಲೇ ಬರುವುದು. ಈಗ ಕೃಷಿಗೆ ಕೊಟ್ಟಂಥ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೆ ಬಳಸಿಕೊಂಡರೆ ಆ ಭೂಮಿಯನ್ನು ಪುನಃ ಸರ್ಕಾರಕ್ಕೆ ಪಡೆಯಲಿಕ್ಕೆ ಕಾನೂನಿನಲ್ಲಿ ಅವಕಾಶ ಇದೆ.

ಶ್ರೀ ಎಂ. ಪಿ. ವೆಂಕಟೇಶ್.—೧೯೭೮ರ ಹಿಂದೆ ಸರ್ಕಾರಿ ಜಮೀನಿನಲ್ಲಿ ಬ್ಲ್ಯಾಕ್ ಗ್ರ್ಯಾನೈಟ್ ಇದೆ ನಮಗೆ ಕೊಡಿ ಎಂದು ಎಲ್ಲರೂ ಅರ್ಜಿ ಹಾಕಿಕೊಂಡರು. ೧೯೭೮ರಲ್ಲಿ ಇದು ನ್ಯಾಷನಲೈಸೇಷನ್ ಆಯಿತು. ಅನಂತರ ಮೈಸೂರು ಮಿನರಲ್ಸ್ ಸಂಸ್ಥೆಯವರು ಹೋಗಿ ತೆಗೆಯಬೇಕು. ಅವರು ಅಲ್ಲಿಗೆ ಹೋಗಲಿಲ್ಲ. ೧೯೭೮ರಿಂದ ಈಚೆಗೆ ಸಾಗುವಳಿ ಪತ್ರ ಕೊಟ್ಟಿದ್ದಾರೆ. ಅದೂ ಬೆಟ್ಟ ಗುಡ್ಡಗಳು. ಕೊಳ್ಳೇಗಾಲ, ಚಾಮರಾಜನಗರ ಇಂತಹ ಕಡೆ ಇರತಕ್ಕ ಜಮೀನುಗಳನ್ನು ಸಾಗುವಳಿಗೆ ಕೊಟ್ಟಿದ್ದಾರೆ. ಅಲ್ಲಿಂದ ಪಟ್ಟಾ ಜಮೀನು ಎಂದು ತೆಗೆದುಕೊಂಡು ಲೂಟಿ ಹೊಡೆದಿದ್ದಾರೆ. ಅಲ್ಲಿಗೆ ಯಾವ ಅಧಿಕಾರಿ ಹೋದರೂ ಲಕ್ಷಾಂತರ ರೂಪಾಯಿಗಳ ದುಡ್ಡು ಕೊಡುತ್ತಾರೆ. ಆದ್ದರಿಂದ, ಇದರ ಬಗ್ಗೆ ಸಂಪೂರ್ಣವಾದ ತನಿಖೆಯನ್ನು ಮಾಡಿ ನೋಡಿ. ಈಗ ತಾವು ಬಂದು ಆರು ತಿಂಗಳು ಆಗಿದೆ. ಇದನ್ನೆಲ್ಲಾ ಪರಿಶೀಲನೆ ಮಾಡಿ ಯಾರು ತಪ್ಪು ಮಾಡಿದ್ದಾರೆ ಅವರಿಗೆ ಶಿಕ್ಷೆ ಮಾಡಿ. ನೋಟಿಫಿಕೇಷನ್ ಮಾಡಿ ನೀವು ಅರ್ಜಿಗಳನ್ನು ಕಾಲ್‌ಫರ್ ಮಾಡಬೇಡಿ. ಏಕೆಂದರೆ, ನೀವು ನೋಟಿಫಿಕೇಷನ್ ಮಾಡಿ ಅವರು ಅರ್ಜಿ ಹಾಕಿದರೆ ಸಾವಿರಾರು ರೂಪಾಯಿಗಳ ಹಣ ಕಟ್ಟಿರುತ್ತಾರೆ. ಸ್ಯಾಂಕ್ಷನ್ ಮಾಡಿ ಎಂದು ಗಲಾಟೆ ಮಾಡುತ್ತಾರೆ. ಅವರು ಕೋರ್ಟಿಗೆ ಹೋಗುತ್ತೇವೆ ಎಂದು ಗಲಾಟೆ ಮಾಡುತ್ತಾರೆ, ನಮಗೆ ಸ್ಯಾಂಕ್ಷನ್ ಮಾಡಿಕೊಡಿ ಎಂದು ಗಲಾಟೆ ಮಾಡುತ್ತಾರೆ. ಆದ್ದರಿಂದ, ಸರ್ಕಾರಕ್ಕೆ ಇಷ್ಟೊಂದು ಆತುರ ಬೇಡ. ನಿಧಾನಕ್ಕೆ ಇದನ್ನು ಪರಿಶೀಲನೆ ಮಾಡಿ. ನಿಧಾನಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇದರಿಂದ ಸಾರ್ವಜನಿಕರಿಗೂ ಅನುಕೂಲವಾಗುವುದಿಲ್ಲವೆಂದು ಹೇಳುತ್ತೇನೆ. ಇವರು ಇಂಡಸ್ಟ್ರಿ ಮಾಡಿಕೊಡಬೇಕು ಎಂದು ಹೇಳುತ್ತಿದ್ದಾರೆ. ಇವೊತ್ತು ಒಂದು ಮೆಷಿನರಿ ಹಾಕಬೇಕಾದರೆ ಹತ್ತು ಲಕ್ಷ ರೂಪಾಯಿಗಳು ಆಗುತ್ತದೆ. ಅವನು ೧೦ ಲಕ್ಷ ರೂಪಾಯಿ ಮೆಷಿನರಿ ಹಾಕಬೇಕಾದರೆ ಅವನು ಇಪ್ಪತ್ತು ಲಕ್ಷ ರೂಪಾಯಿ ಆಸ್ತಿವಂತನಾಗಿರಬೇಕು. ಅವನು ಏನಾದರೂ ಬ್ಯಾಂಕ್‌ನಲ್ಲಿ ಸಾಲ ಕೇಳಲಿಕ್ಕೆ ಹೋದರೆ ನಿನಗೆ ಇಪ್ಪತ್ತು ಲಕ್ಷ ರೂಪಾಯಿ ಆಸ್ತಿ ಇದೆಯೋ ಎಂದು ಕೇಳುತ್ತಾರೆ. ಆ ತರಹ ಏನಾದರೂ ಮಾಡಬೇಕಾದರೆ ನಿಮಗೆ ತಮಿಳುನಾಡು, ಗುಜರಾತ್‌ನಿಂದ ಜನರು ಬರಬೇಕು. ಮಾನ್ಯ ಕಾಗೋಡು ತಿಮ್ಮಪ್ಪನವರು ಹಿಂದಿನ ಚರಿತ್ರೆ ಹೇಳಿ ಎಂದು ಹೇಳುತ್ತಿದ್ದಾರೆ.

ಶ್ರೀ ಬಿ. ಶಿವಣ್ಣ.—ಮಾನ್ಯ ವಾಟಾಳ್ ನಾಗರಾಜ್‌ರವರೆ ದಯಮಾಡಿ ಮೈನ್ಸ್ ಅಂಡ್ ಜಿಯಾಲಜಿ ಬಗ್ಗೆ ಹೇಳಬೇಕೆಂದು ಕೇಳುತ್ತೇನೆ. ತಾವು ಗ್ರ್ಯಾನೈಟ್ ಕಲ್ಲಿನ ಬಗ್ಗೆ ಹೇಳಬೇಕು. ನೀವು ಬಯಂಬೃತ್ತಾ ಎರಡೂ ಮಿಕ್ಸ್ ಮಾಡಿ ಹೇಳಿ ಪಾಪಕ್ಕೆ ಸಿಕ್ಕಿಹಾಕಿಕೊಳ್ಳಬೇಡಿ.

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಕಾಗೋಡು ತಿಮ್ಮಪ್ಪನವರು ಹಳೆಯದು ಹೇಳಿ ಎಂದು ಹೇಳುತ್ತಿದ್ದಾರೆ. ಹಳೆಯದು ಗೊತ್ತಾಗಬೇಕು, ಹೊಸದು ಗೊತ್ತಾಗಬೇಕು. ಎರಡೂ ಗೊತ್ತಾಗಲಿ.

ಶ್ರೀ ಬಿ. ಶಿವಣ್ಣ.—ಗ್ರ್ಯಾನೈಟ್ ಪಾಲಿಸಿ ಏನಿದೆ ಅದರ ಬಗ್ಗೆ ವಿರುದ್ಧ ಇದ್ದರೆ ಹೇಳಿ. ಸುಮ್ಮನೆ ಬಯ್ಯುತ್ತಾ ಟೈಮ್ ವೇಸ್ಟ್ ಮಾಡುವುದು ಬೇಡ. ಅದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್.—ಒಂದೇ ದಿವಸದಲ್ಲಿ ಕೊಳ್ಳೇ ಹೊಡೆದ ಹಾಗೆ ಅಲ್ಲ ಹೇಳಲಿಕ್ಕೆ.

ಶ್ರೀ ಬಿ. ಶಿವಣ್ಣ.—ನೀವು ಹೇಳುವಾಗ ಮಿಕ್ಸ್ ಅಪ್ ಮಾಡಬೇಡಿ ಎಂದು ಹೇಳಿದೆ.

ಶ್ರೀ ಎಂ. ಮಹದೇವ್.—ಅವರು ಮಾತನಾಡುತ್ತಿರುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಭ್ರಷ್ಟಾಚಾರ ಮಾಡಿದ್ದಾರೆ, ಹೊಡೆದಿದ್ದಾರೆನ್ನುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮಹದೇವ್‌ರವರು ನನ್ನ ಆತ್ಮೀಯ ಮಿತ್ರರು. ಅವರ ಮನೆ ಮುಂದೆ ರಸ್ತೆಯಲ್ಲಿ ಆ ಕಲ್ಲುಗಳ ಲಾರಿಗಳು ಹೋಗುತ್ತಿರುತ್ತವೆ ಅದನ್ನು ಕಣ್ಣಾರೆ ಕಂಡಿರಬಹುದು ಆದರೆ ಅದನ್ನು ಇಲ್ಲಿ ಹೇಳಲಾರರು. ನೀವು ಮಾಡಿದ್ದೀರಿ ಎಂದು ನಾನು ಹೇಳುತ್ತಿಲ್ಲ. ನಿಮ್ಮ ಮನೆಯ ಮುಂದೆ ಕಲ್ಲುಗಳ ಲಾರಿಗಳು ಹೋಗುತ್ತಾ ಇರುತ್ತವೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನಮ್ಮ ಸ್ನೇಹಿತರು ಈಗತಾನೆ ಹೇಳಿದರು ಈ ಸರಕಾರ ಭ್ರಷ್ಟಾಚಾರ ಮಾಡಿದೆ ಕಲ್ಲಿನ ಗಣಿ ದುರುಪಯೋಗವಾಗುತ್ತಿದೆ ಎಂದು ಕೂಡ ತಮ್ಮ ವಾದವನ್ನು ಮಂಡಿಸಿದ್ದಾರೆ. ಕಲ್ಲಿನ ಗಣಿ ಸಮಸ್ಯೆ ಇವತ್ತಿನದಲ್ಲ ಕಳೆದ ೮–೧೦ ವರ್ಷಗಳಿಂದ ಸತತವಾಗಿ ಬೆಂಗಳೂರು – ಮಂಗಳೂರು ಹೆದ್ದಾರಿಯಲ್ಲಿ ಇದು ನಡೆಯುತ್ತಿವೆ. ನಾನು ಬೆಂಗಳೂರಿಗೆ ಬರಬೇಕೆಂದು ಹೊರಟರೆ ಸುಮಾರು ೨೦೦–೩೦೦ ಲಾರಿಗಳು ಕಲ್ಲನು ತುಂಬಿಕೊಂಡು ಹೋಗುತ್ತಿದ್ದುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಆದರೆ ಈಗ ಅದು ಸ್ವಲ್ಪ ಕಡಿಮೆಯಾಗಿದೆ. ಪೂರ್ತಿಯಾಗಿ ಕಡಿವಾಣವನ್ನು ಈ ಸರಕಾರದವರು ಹಾಕಿದ್ದಾರೆಂದು ನಾನು ಹೇಳುವುದಕ್ಕೆ ಹೋಗುತ್ತಿಲ್ಲ. ಸ್ವಲ್ಪ ಕಡಿಮೆಯಾಗಿದೆ. ಇವತ್ತು ಬಹಳ ಜನ ಎಕ್ಸೈಸ್‌ನಲ್ಲಿ ದುಡ್ಡು ಮಾಡುವುದಕ್ಕೆ ಆಗುತ್ತಿಲ್ಲವೆಂದು ಕಲ್ಲಿನ ಗಣಿಗೆ ಲಗ್ಗೆ ಹಾಕಿದ್ದಾರೆ. ನಾನು ಮೊನ್ನೆ ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಗೆ ಹೋಗಿ ಯಾರುಯಾರು ಲೈಸನ್ಸ್‌ಗೆಂದು ಅರ್ಜಿ ಹಾಕಿದ್ದಾರೆ ಎಂಬುವರ ಪಟ್ಟಿಯನ್ನು ನೋಡೋಣವೆಂದು ವಿಚಾರ ಮಾಡಿದೆ ಅದು ಸ್ವಲ್ಪ ಕಡಿಮೆಯಾಗಿದೆ. ಆದರೂ ಸಹ ಸರಕಾರ ಈಗ ಮಾಡಿರತಕ್ಕಂತಹ ಪಾಲಿಸಿಯಲ್ಲಿ ಸ್ವಲ್ಪ ಮಾರ್ಪಾಡು ಮಾಡಬೇಕಾಗುತ್ತದೆ. ಮೊದಲು ಲೈಸನ್ಸ್ ಕೊಡಬೇಕಾಗಿದ್ದರೆ ಕಾರ್ಪೋರೇಷನ್ಸ್‌ಗಳಿಗೆ, ಮೈಸೂರು ಮಿನರಲ್ಸ್ ಕಂಪೆನಿಗೆ ಸೆಂಟ್ರಲ್ ಸೆಕ್ಟರ್‌ನಲ್ಲಿರತಕ್ಕಂಥಾದ್ದಕ್ಕೆ ಮೊದಲ ಆದ್ಯತೆ ಕೊಟ್ಟು ಎರಡನೇ ಆದ್ಯತೆಯನ್ನು ಯಾರು ಕಾರ್ಖಾನೆಯನ್ನು ಇಟ್ಟುಕೊಂಡಿರುತ್ತಾರೆ ಅಂತಹವರಿಗೆ ಕೊಡಬೇಕು. ಈ ರಾಜ್ಯದ ಸಂಪತ್ತು ಸೋರಿ ಹೋಗುತ್ತಿರುವುದನ್ನು ತಪ್ಪಿಸಲು ಈ ಪಾಲಿಸಿಯನ್ನು ಸ್ವಲ್ಪ ಮಾರ್ಪಾಡು ಮಾಡಬೇಕೆಂದು ಸರಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನನ್ನ ಪಕ್ಕದಲ್ಲಿ ಮಾನ್ಯ ಶಿವರಾಮೇಗೌಡರವರು ಕುಳಿತಿದ್ದಾರೆ ಒಂದು ಸಾರಿ ನನ್ನ ಕಡೆ ಬಾಣ ಬಿಡುತ್ತಾರೆ ಮತ್ತೊಂದು ಸಾರಿ ಬೇರೆಯವರ ಕಡೆ ಬಾಣ ಬಿಡುತ್ತಾರೆ. ಅವರು ಯಾರ ಕಡೆ ಬಾಣ ಬಿಟ್ಟರೂ ಕೂಡ ಅವರನ್ನು ನನ್ನ ಪಕ್ಕದಲ್ಲಿ ಇಟ್ಟುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇನೆ ನನಗೆ ಅವರಲ್ಲಿ ವಿಶ್ವಾಸ ಇದೆ ಅವರು ಆ ಕಡೆ ಹೋದರೂ ವಿಶ್ವಾಸ ಇರುತ್ತದೆ. ಅವರು ಗೌಪ್ಯವಾಗಿ ಆ ಕಡೆ ಹೋಗಿದ್ದಾರೆ ಆದರೂ ಸಹ ಅವರು ಇಲ್ಲೇ ಇರಬೇಕು. ಹೇಳುವುದನ್ನೆಲ್ಲಾ ಹೇಳಿಯಾದ ಮೇಲೆ ನನ್ನನ್ನು ಸಮಾಧಾನ ಮಾಡುತ್ತಾರೆ ನನಗೆ ಅವರಲ್ಲಿ ಗೌರವ ಇದೆ. ಲೈಸನ್ಸ್ ಅನ್ನು ಕೊಡುವಲ್ಲಿ ಸ್ವಲ್ಪ ಮಾರ್ಪಾಡು ಮಾಡಿ ಎಂದು ಅವರು ಹೇಳಿದರು. ಲೈಸನ್ಸ್ ಕೊಡಿ ಎಂದು ಹೇಳಲು ನಾನು ತಯಾರಿಲ್ಲ, ನೀವು ಲೈಸನ್ಸ್ ಅನ್ನು ಕೊಡಲೇಬಾರದು. ನಮ್ಮ ರೈತ ಸಂಘದ ಮಾನ್ಯ ನಂಜುಂಡಸ್ವಾಮಿಯವರ ಅಭಿಪ್ರಾಯವೂ ಕೂಡ ಇದೇ ಆಗಿದೆ. ಪಾಲಿಸಿಯನ್ನು ತಿದ್ದಿ ಲೈಸನ್ಸ್ ಕೊಡಿ ಎಂದು ನಾವು ಯಾರೂ ಹೇಳುವುದಿಲ್ಲ. ಕಳೆದ ಹತ್ತು ವರ್ಷಗಳಿಂದ ಮಡಕೆ ತೂತಾಗಿದೆ ಇನ್ನು ಹತ್ತು ವರ್ಷಗಳಲ್ಲಿ ಅದು ಹೀರಿಕೊಳ್ಳುವುದು ಕೆಳಗಡೆ ಹೋಗುವುದು ಎಲ್ಲಾ ಸೋರಿ ಹೋಗುವುದು. ಆ ಮೇಲೆ ಇಡೀ ಮಂತ್ರಿ ಮಂಡಲ ಬೇವಿನ ಸೊಪ್ಪು ಕಟ್ಟಿಕೊಂಡು ಮಾರಮ್ಮನ ಮುಂದೆ ನರ್ತನ ಮಾಡಿದರೂ ಒಂದು ಕಲ್ಲು ಚೂರೂ ಸಿಗುವುದಿಲ್ಲ. ಇದು ನನ್ನ ಸ್ಪಷ್ಟವಾದ ಅಭಿಪ್ರಾಯವಾಗಿದೆ. ಗುತ್ತೇದಾರರು ಹೋಗಲಿ ಅವರನ್ನು ಕಟ್ಟಿಕೊಂಡು ನಮಗೇನು ಆಗಬೇಕು ಈ ಕಾರ್ಖಾನೆಗಳಿಂದ ಯಾರ ಉದ್ಧಾರವಾಗುತ್ತಿದೆ. ಭೂ ವೈಜ್ಞಾನಿಕ ಗಣಿ ಇಲಾಖೆಯಲ್ಲಿ ಎಷ್ಟು ಜನ ಈ ಗಣಿ ಕೆಲಸದಲ್ಲಿರುವಾಗ ಸತ್ತಿದ್ದಾರೆ ಎಷ್ಟು ಜನ ಕೈ ಕಾಲು ಕಳೆದುಕೊಂಡಿದ್ದಾರೆ ಎಂಬುದರ ಬಗ್ಗೆ ತನಿಖೆಯನ್ನು ನಡೆಸಿದ್ದೀರಾ? ಇಲ್ಲ. ಇದಕ್ಕೆ ಕಾರಣವೇನೆಂದರೆ ಇಲ್ಲಿ ನಿಮ್ಮ ಇಲಾಖೆ ಶಾಮೀಲಾಗಿದೆ,

ಪೋಲೀಸ್ ಇಲಾಖೆ, ವೈದ್ಯರುಗಳು ಶಾಮೀಲಾಗಿದ್ದಾರೆ. ಹಣವನ್ನು ಬಂಡೆಯ ಕೆಳಗೆ ಮುಚ್ಚಿದ್ದಾರೆ ಅಲ್ಲಿಯೇ ಅದು ಸಮಾಧಿಯಾಗಿದೆ. ಭಾರಿಭಾರಿ ಕಲ್ಲುಗಳನ್ನು ತೆಗೆದು ಸಿಡಿಮದ್ದುಗಳನ್ನು ಇಟ್ಟು ಬಂಡೆಗಳನ್ನು ಸಿಡಿಸಿದರೂ ಕೂಡ ಈ ಕೆಲಸಮಾಡುವಾಗ ಅಲ್ಲಿ ಯಾವ ಕೂಲಿಯವರಿಗೂ ಗಾಯಗಳಾಗಿಲ್ಲ, ಯಾರಿಗೂ ಕೈಕಾಲು ಮುರಿದಿಲ್ಲ, ಯಾರೂ ಸತ್ತಿಲ್ಲ ಎಂದು ತಾವು ಹೇಳುವುದಾದರೆ ಇದು ಎಷ್ಟು ಕಠೋರ ನಗ್ನ ಸತ್ಯ. ಎಲ್ಲಾ ಗಣಿಗಳಲ್ಲೂ ಕೂಲಿಗಾರರ ಸಾವುನೋವುಗಳಾಗುತ್ತಿವೆ. ಆದರೆ ಇದು ಹೊರಗೆ ಬರುವುದಿಲ್ಲ. ಗಣಿ ಕಾರ್ಮಿಕರಿಗೆ ಅವರು ಕೊಡುತ್ತಿರುವುದಾದರೂ ಎಷ್ಟು ? ೧೨ ರೂಪಾಯಿ ದಿನಗೂಲಿಯನ್ನು ಕೊಡುತ್ತಿದ್ದಾರೆ. ಅವರಿಗೆ ಕೆಲಸದ ಭದ್ರತೆಯನ್ನು ಏನಾದರೂ ಕೊಟ್ಟಿದ್ದೀರಾ ? ಕಾರ್ಖಾನೆಗಳಲ್ಲಿ ಕೆಲಸಮಾಡುವ ಕಾರ್ಮಿಕರಿಗೆ ಅನ್ವಯಿಸುವ ಕಾಯಿದೆಯನ್ನು ಇವರಿಗೇನಾದರೂ ಅನ್ವಯಿಸಿದ್ದೀರಾ ? ಕೇಂದ್ರದ ಗಣಿ ಕಾಯಿದೆಯನ್ನು ಇವರಿಗೇನಾದರೂ ಅನ್ವಯಿಸುವಂತೆ ಮಾಡಿದ್ದೀರಾ ? ಈ ಗಣಿಗಳಲ್ಲಿ ಕೆಲಸಮಾಡುತ್ತಿರುವವರಲ್ಲಿ ನೂರಕ್ಕೆ ೯೦ ಜನ ತಮಿಳುನಾಡಿನಿಂದ ಬಂದವರು ಕಲ್ಲು ಸಾಗಿಸುವವರನ್ನು ತೆಗೆದುಕೊಂಡರೆ ನೂರಕ್ಕೆ ೯೦ ಜನ ತಮಿಳುನಾಡಿನವರು, ನಮ್ಮ ರಾಜ್ಯವನ್ನು ಲೂಟಿ ಮಾಡುವುದಕ್ಕೆ ಬಂದಿರುವವರು ತಮಿಳ್ನಾಡಿನವರು. ನಮ್ಮ ರಾಜ್ಯದ ಸಂಪತ್ತನ್ನು ಲೂಟಿ ಮಾಡಲು ಬಂದಿರುವವರು ತಮಿಳ್ನಾಡಿನವರು. ಆ ಕಡೆಯ ಜನ ಬಂದು ನಮ್ಮ ರಾಜ್ಯದ ಸಂಪತ್ತನ್ನು ಲೂಟಿ ಮಾಡುತ್ತಿರುವುದನ್ನು ನೀವೇನಾದರೂ ನೋಡಿದ್ದೀರಾ? ನಿಮ್ಮ ಕಣ್ಣು, ನಿಮ್ಮ ಗಮನ ಇರುವುದೆಲ್ಲಾ ಕೇವಲ ಗುತ್ತಿಗೆದಾರರನ್ನು ಬದುಕಿಸುವ ಕಡೆಗೆ. ಆ ಗುತ್ತಿಗೆದಾರರಿಂದ ನಿಮಗೆ ಬರತಕ್ಕ ಹಣದಲ್ಲಿ ನಿಮ್ಮ ರಾಜ್ಯದ ಬಡತನವನ್ನು ನೀಗಿಸುವುದಕ್ಕಾಗುತ್ತದೆಯೇ ? ಅವರಿಂದ ಬರತಕ್ಕದ್ದು ಕೇವಲ ೨೦ ಕೋಟಿ ರೂಪಾಯಿಗಳು. ಇದರಿಂದ ನಿಮ್ಮ ರಾಜ್ಯದ ಬಡತನ ನೀಗುವುದಿಲ್ಲ. ನಿಮಗೆ ಬರತಕ್ಕ ರಾಯಲ್ಟಿ ೧ ವರ್ಷಕ್ಕೆ ೨೦ ಕೋಟಿಯಂತೆ ೧೦ ವರ್ಷಕ್ಕೆ ನಿಮಗೆ ಬರತಕ್ಕದ್ದು ಕೇವಲ ೨೦೦ ಕೋಟಿ ರೂಪಾಯಿಗಳು. ಇದು ನಿಮ್ಮ ಅಧಿಕಾರಿಗಳು ಕೊಡತಕ್ಕ ಅಪ್ರಮಾಣಿಕ ಲೆಕ್ಕದ ಪ್ರಕಾರ, ತಲೆಬುಡವಿಲ್ಲದ ಲೆಕ್ಕದ ಪ್ರಕಾರ, ಇದೆಲ್ಲಾ ಗಲಾಟೆ ಆದ ಮೇಲೆ ಮಾನ್ಯ ರಾಜಶೇಖರ ಮೂರ್ತಿಯವರು ಹೇಳಿದರು, ವರ್ಷಕ್ಕೆ ೪೦ ಕೋಟಿ ರೂಪಾಯಿ ಬರುತ್ತದೆ ಎಂದು ಕಲ್ಲು ತೆಗೆಯುವುದಕ್ಕೆ ನಾನು ಬೆಂಬಲವನ್ನು ಕೊಡುವುದಿಲ್ಲ. ಆದರೆ ನೀವು ಕೊಡತಕ್ಕ ಲೆಕ್ಕಕ್ಕೆ ನಾನು ಛಾಲೆಂಜ್ ಮಾಡುತ್ತೇನೆ ರಾಜ್ಯದ ಆದಾಯವನ್ನು ಹೆಚ್ಚು ಮಾಡುವುದಕ್ಕೆ ನೀವು ಬಹಳ ಪ್ರಯತ್ನ ಮಾಡುತ್ತಿದ್ದೀರಿ. ನಾನು ತಮಗೆ ಹೇಳುತ್ತೇನೆ, ನೀವು ಅಷ್ಟೊಂದು ಕಷ್ಟ ಪಡುವುದು ಬೇಡ. ಇಡೀ ರಾಜ್ಯದಲ್ಲಿರತಕ್ಕ ಎಲ್ಲಾ ಕಲ್ಲು ಗಣಿಗಳನ್ನೂ ನನಗೆ ವಹಿಸಿದರೆ ನಾನು ಸರ್ಕಾರಕ್ಕೆ ವರ್ಷಕ್ಕೆ ೬೦ ಕೋಟಿ ರೂಪಾಯಿಗಳನ್ನು ಕೊಡುತ್ತೇನೆ.......

ಶ್ರೀ ಜಿ.ಎಸ್. ಶಿವನಂಜಪ್ಪ.—ಆಗಬಹುದು, ನೀವೇ ತೆಗೆದುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್.— ಕೇವಲ ಹೇಳಿದರೆ ಆಗುವುದಿಲ್ಲ. ನನಗೆ ಬರೆದುಕೊಡಿ, ನಾನು ೬೦ ಸಾವಿರ ರೂಪಾಯಿಗಳಂತೆ ಕೊಡುತ್ತೇನೆ. ಒಂದೊಂದು ಕಲ್ಲುಗಣಿಗಳನ್ನು ಹರಾಜು ಹಾಕಿದರೆ ಅದರಿಂದ ೨೦೦-೩೦೦ ಕೋಟಿ ರೂಪಾಯಿಗಳು ಬರುತ್ತದೆ. ಆದರೂ ನಾನು ಏತಕ್ಕೆ ೬೦ ಕೋಟಿ ರೂಪಾಯಿಗೆ ಕೇಳಿದೆ ಎಂದರೆ ನನಗೂ ಕೂಡ ಇದರಲ್ಲಿ ಸ್ವಲ್ಪವಟ್ಟಿಗೆ ಸಂಪಾದನೆ ಆಗುತ್ತದೆ. ಆದ್ದರಿಂದ ನಾನು ೬೦ ಕೋಟಿ ರೂಪಾಯಿಗಳಿಗೆ ಕೇಳಿದ್ದುದು. ನೀವು ಏನು ಮಾಡುತ್ತಿದ್ದೀರಿ ಎಂದರೆ, ಕೈ ಬೆರಳಿನಲ್ಲಿ ಎಣಿಸುವಷ್ಟು ಇರತಕ್ಕ ಕೆಲವೇ ಕೆಲವು ಜನರಿಗೆ ಆದಾಯ ಮಾಡಿಕೊಡುವ ಸಲುವಾಗಿ, ಅನುಕೂಲ ಮಾಡಿಕೊಡುವ ಸಲುವಾಗಿ ಈ ಕಲ್ಲು ತೆಗೆಯಲು ಲೈಸೆನ್ಸನ್ನು ಕೊಡುತ್ತಿದ್ದೀರಿ. ನಮ್ಮ ರಾಜ್ಯದ ಖಜಾನೆಗೆ ಹಣ ಏನು ಬರಬೇಕಾಗಿತ್ತೋ ಅದು ಇವತ್ತು ಸೋರಿ ಹೋಗುವಂತೆ ಮಾಡುತ್ತಿದ್ದೀರಿ. ಅವರು ತೆಗೆದು ಕಳುಹಿಸತಕ್ಕ ಒಂದೊಂದು ಕಲ್ಲಿನ ಬೆಲೆ ಎಷ್ಟು ಎಂದು ನಿಮಗೆ ಗೊತ್ತಿಲ್ಲ. ನೀವು ಎಂದೂ ಆ ಕಲ್ಲಿನ ಬೆಲೆಯನ್ನು ಕೇಳಿಲ್ಲ. ಅವರು ಸರ್ಕಾರಕ್ಕೆ ಕೊಡತಕ್ಕದ್ದು ಒಂದು ಕಲ್ಲಿಗೆ ೬೦೦ ರೂಪಾಯಿ. ಆದರೆ ಅದೇ ಕಲ್ಲಿನಿಂದ ಅವರು ಸಂಪಾದನೆ ಮಾಡಿಕೊಳ್ಳುವುದು ೨೫,೦೦೦ ದಿಂದ ೫೦,೦೦೦ ರೂಪಾಯಿವರೆಗೆ. ಇಷ್ಟೊಂದು ಆದಾಯ ರಾಜ್ಯದ ಬೊಕ್ಕಸಕ್ಕೆ ಬರಬೇಕಾದದ್ದು ಈ ಗುತ್ತಿಗೆದಾರರಿಗೆ ಹೋಗುತ್ತಿದೆ.

ಮಾನ್ಯ ಅಧ್ಯಕ್ಷರೆ, ತಮಗೂ ಗೊತ್ತಿರಬಹುದು, ಇಳಕಲ್‌ನಲ್ಲಿ ಮಲ್ಟಿಕಲರ್ ಗ್ರ್ಯಾನೈಟ್ ಸಿಕ್ಕುತ್ತದೆ. ಅದು ಬಹಳ ಬೆಲೆಬಾಳತಕ್ಕದ್ದು. ನಾನು ತಮ್ಮನ್ನು ಕೇಳುತ್ತೇನೆ, ನೀವು ಮಂತ್ರಿಗಳಾಗಿ ೬ ತಿಂಗಳಾಯಿತು, ಎಂದಾದರೂ ನೀವು ಈ ಕಲ್ಲುಗಣಿಗಳಿಗೆ ಭೇಟಿಯನ್ನು ಕೊಟ್ಟಿದ್ದೀರಾ ? ಅಲ್ಲಿ ಎಷ್ಟು ಬೆಲೆಬಾಳುವ ಕಲ್ಲನ್ನು ತೆಗೆಯುತ್ತಾರೆ ಎಂಬುದು ಗೊತ್ತೆ ? ರಾಜ್ಯದಲ್ಲಿ ಎಷ್ಟು ಇಂಥ ಕಲ್ಲು ಗಣಿಗಳಿವೆ ಎಂಬ ಮಾಹಿತಿ ನಿಮ್ಮ ಹತ್ತಿರ ಇದೆಯೇ ?, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು ಎಷ್ಟು ಜನ ಈ ಗಣಿ ಮಾಲೀಕರ ಜೊತೆ ಶಾಮೀಲಾಗಿದ್ದಾರೆ ಎಂಬುದು ಗೊತ್ತೆ ? ಕಲ್ಲಿನ ವ್ಯವಹಾರವನ್ನು ಮಾಡತಕ್ಕ ಕಂಪೆನಿಗಳ ಹೆಸರುಗಳ ಪಟ್ಟಿಯನ್ನು ನೀವೇನಾದರೂ ತರಿಸಿಕೊಂಡಿದ್ದೀರಾ ?

ಅದರಲ್ಲಿ ಯಾರ್ಯಾರು ಷೇರುದಾರರಿದ್ದಾರೆ ಗೊತ್ತೆ ? ಆ ಪಟ್ಟಿಯನ್ನೇನಾದರೂ ನೋಡಿದ್ದೀರಾ ? ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿವೃತ್ತ ಅಧಿಕಾರಿಗಳೂ ಮತ್ತು ಈಗಿರತಕ್ಕ ಅಧಿಕಾರಿಗಳೂ ಕೂಡ ಇದರಲ್ಲಿ ಶಾಮೀಲಾಗಿದ್ದಾರೆ.

ಆದ್ದರಿಂದ ನಿಮ್ಮ ಗಣಿ ಭೂ ವಿಜ್ಞಾನ ಇಲಾಖೆಯ ಮೇಲೆ ಸಿ.ಓ ಡಿ. ತನಿಖೆ ಮಾಡಿಸಿದ ಅವರ ವರದಿ ಬಂದಿದೆಯೇ ? ಆ ವರದಿಯಲ್ಲಿ ಏನಿದೆ ಅದನ್ನು ತಾವು ಸಮಗ್ರವಾಗಿ ಪರಿಶೀಲನೆ ಮಾಡಿ ನೋಡಿದ್ದೀರಾ ? ಇವೆಲ್ಲವನ್ನು ನೀವು ಪರಿಶೀಲನೆ ಮಾಡದೆ ರಾಜ್ಯದ ಮಾನವ ಕುಲದ ಮೇಲೆ ಏನೇನು ಅನ್ಯಾಯಗಳು ನಡೆಯಬೇಕೋ ಅದೆಲ್ಲ ನಡೆಯಲು ಅನುಕೂಲ ಮಾಡಿಕೊಟ್ಟಿದ್ದೀರಿ. ನೈಸರ್ಗಿಕ ಅಸಮತೋಲನ ಏನು ಆಗುತ್ತಿದೆ ಅದೆಲ್ಲವನ್ನು ಒಂದೊಂದಾಗಿ ಸಮಗ್ರವಾಗಿ ತಾವು ಪರಿಶೀಲನೆ ಮಾಡಬೇಕಾದದ್ದು ತಮ್ಮ ಕರ್ತವ್ಯ. ಇದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸಚಿವರಾದ ನಿಮ್ಮ ಕರ್ತವ್ಯವಾಗಿದೆ. ಇದನ್ನು ಯಾವುದೂ ಮಾಡಲಿಲ್ಲ. ಬಹುಶಃ ಹಿಂದೆ ಇದ್ದಂಥ ಸರ್ಕಾರದ ಮೇಲೆ ಒತ್ತಡ ತಂದು ಈ ಗಣಿ ಮಾಲೀಕರು ಅವರ ಜೊತೆಯಲ್ಲಿ ಸ್ನೇಹವಾಗಿದ್ದರೆ ಹೊರತು ಬಹಿರಂಗವಾಗಿ ನಿಮ್ಮ ರೀತಿಯಲ್ಲಿ ಕಲ್ಲುಗಳನ್ನು ಮಾರಬೇಕೆಂದು ಹೇಳಿ ಲೈಸೆನ್ಸನ್ನು ಕೊಟ್ಟಿರಲಿಲ್ಲ. ಆಗ ೩ ಕೋಟಿ ಇಂದು ೫ ಕೋಟಿ ೮ ಕೋಟಿಯವರೆಗೆ ವರಮಾನ ಬರುತ್ತಿತ್ತು. ಅಧ್ಯಕ್ಷರೇ ಯಾರೂ ಇದರ ಪಾತಾಳವನ್ನು ನೋಡಿಲ್ಲ. ನಿಮ್ಮ ಸೆಕೆಂಡ್ ನಿಲ್ಲಿಸಿದರೆ ಸಾಕು. ಸೆಕೆಂಡ್ಸ್ ಯಾವುದರೆ ಅವು ಬಹಳ ಚರಿತ್ರೆಯನ್ನು ಒಳಗೊಂಡಿದೆ. ಅದನ್ನು ತಾವು ಅರ್ಥ ಮಾಡಿಕೊಂಡಿದ್ದರೆ ಸಾಕು. ಇದನ್ನು ಒಂದು ಪಾಲಿಸಿ ಮಾಡಬೇಕು ಹೇಗೆ ಪಾಲಿಸಿ ಮಾಡುವುದು ಎಂದು ನಾನು ಹೇಳಬೇಕಾಗಿಲ್ಲ. ಕತ್ತೆಯನ್ನು ತೆಗೆದುಕೊಂಡು ಹೋಗಿ ಕುದುರೆ ಮಾಡುವ ಯೋಚನೆ ಮಾಡಬೇಕಾಗಿಲ್ಲ. ಏಕ್‌ದಮ್ ಕತ್ತೆಯನ್ನು ಕುದುರೆಗೆ ಹೋಲಿಸಲು ಸಾಧ್ಯವೇ ಆಗುವುದಿಲ್ಲ. ನಿಮ್ಮ ಜವಾಬ್ದಾರಿ ಏನು ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳನ್ನೆ ನೋಡತಕ್ಕಂಥ ಅವಶ್ಯಕತೆ ಏನೂ ಇಲ್ಲ. ಹಣಕಾಸಿನ ಮಂತ್ರಿಗಳಾಗಿ ತಾವು ಹೇಳಬಹುದು. ಹಣವನ್ನು ಸಂಪಾದನೆ ಮಾಡುವುದು ಒಂದೇ ಗುರಿಯಲ್ಲ. ಈ ರಾಜ್ಯದ ನೈಸರ್ಗಿಕ ಸಂಪತ್ತನ್ನು ಉಳಿಸುವ ಬಗ್ಗೆ ತಾವು ಯೋಚನೆ ಮಾಡಬೇಕು. ನೈಸರ್ಗಿಕ ಸಂಪತ್ತಿನ ಬಗ್ಗೆ ತಮಗೆ ಕಾಳಜಿ ಇಲ್ಲವೇ ಅಥವಾ ನೈಸರ್ಗಿಕ ಸಂಪತ್ತಿನ ವಿಚಾರ ತಮಗೆ ಗೊತ್ತಿಲ್ಲವೇ ಎಂದು ನಾನು ಹೇಳಬೇಕಾಗಿದೆ. ಆದ್ದರಿಂದ ಸರಿಯಾದ ಭೂಗರ್ಭ ಪರಿಣತರು ಭೂ ವಿಜ್ಞಾನಿಗಳನ್ನು ತಾವು ಕರೆದು ಎಲ್ಲಿ ಕಲ್ಲನ್ನು ತೆಗೆಯಬೇಕು, ಎಲ್ಲೆಲ್ಲಿ ಕಲ್ಲನ್ನು ತೆಗೆಯಲು ಸಾಧ್ಯ, ಎಷ್ಟೆಷ್ಟು ಮೀಟರ್ ಕಲ್ಲನ್ನು ತೆಗೆಯಬಹುದು, ಎಷ್ಟು ಮೀಟರ್ ಆಳವಲ್ಲಿ ಕಲ್ಲನ್ನು ತೆಗೆದರೆ ಸಣ್ಣ ಗಣಿಯಾಗುತ್ತದೆ, ಎಷ್ಟು ಮೀಟರ್ ಆಳದಲ್ಲಿ ಕಲ್ಲನ್ನು ತೆಗೆದರೆ ದೊಡ್ಡ ಗಣಿಯಾಗುತ್ತದೆ ಎಂಬುದನ್ನು ಕೇಳುತ್ತೇನೆ. ದೊಡ್ಡ ಗಣಿ ಕಾಯಿದೆ ಏನು, ಸಣ್ಣ ಗಣಿ ಕಾಯಿದೆ ಏನು ಎನ್ನುವುದನ್ನೆಲ್ಲ ತಾವು ಪರಿಶೀಲನೆ ಮಾಡಿದ್ದೀರಾ ಎಂದು ಕೇಳುತ್ತೇನೆ. ಕಾರ್ಮಿಕರಿಗೆ ಏನು ಪರಿಹಾರವನ್ನು ಕೊಡಬೇಕು ಎನ್ನುವ ಬಗ್ಗೆ ನೋಡಿದ್ದೀರಾ ? ``ಕೋಣ ಈಯಿತು ಎಂದರೆ ಕೊಟ್ಟಿಗೆಯಲ್ಲಿ ಕಟ್ಟು'' ಎಂಬ ಗಾದೆಯಂತೆ ನಿಮ್ಮ ನೀತಿಯಾಗಿದೆ. ಪ್ರಮುಖವಾಗಿ ಹೇಳುತ್ತಿದ್ದೇನೆ ಭದ್ರತೆ ಇಲ್ಲದ ಕೆಲಸ ಮಾಡಿಬಿಟ್ಟಿದ್ದಾರೆ. ಈಗಲೂ ಕೂಡ ಎಷ್ಟು ಅರ್ಜಿಗಳು ಬಂದಿರುತ್ತವೆ ? ಎಷ್ಟು ಅಲಾಟಿಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಅಲಾಟ್ ಮಾಡಲಿಕ್ಕೆ ಎಷ್ಟು ಅರ್ಜಿಗಳು ಬಂದಿದೆ. ಎಷ್ಟು ಅರ್ಜಿದಾರರು ಇರುತ್ತಾರೆ ? ಅಲಾಟ್ ಪಡೆಯದೆ ಇಂತಿಷ್ಟು ಇರತಕ್ಕಂಥ ಅರ್ಜಿದಾರರು ಯಾರು ಯಾರು ಎಂಬುದನ್ನು ಸಮಗ್ರವಾಗಿ ತನಿಖೆ ಮಾಡಿಸುತ್ತೀರಾ ? ಅಲ್ಲಿಯವರೆಗೆ ನಿಮ್ಮ ಆಜ್ಞೆಯನ್ನು ನಿಲ್ಲಿಸುವುದಕ್ಕೆ ಇನ್ನೊಂದು ಆಜ್ಞೆಯನ್ನು ಹೊರಡಿಸುತ್ತೀರಾ ಎಂದು ಕೇಳುತ್ತೇನೆ.

SRI M. RAJASHAKER MURTHY.— Yes.

ಶ್ರೀ ವಾಟಾಳ್ ನಾಗರಾಜ್.— ಇದಕ್ಕೆ 'ಓ ಎಸ್' ಎಂದು ಹೇಳುತ್ತೀರಿ. ಸರ್ಕಾರದ ಪರವಾಗಿ ಇವರೇ ಉತ್ತರಿಸುವ ಹಾಗೆ ಕಾಣುತ್ತದೆ.

೧-೪೫ ಪಿ.ಎಂ.

ಒಬ್ಬ ಮಾನ್ಯ ಸದಸ್ಯರು.— ನಾವು ಹೇಳುವುದೆಲ್ಲ ಹೇಳುತ್ತೇವೆ. ಏನು ತಿದ್ದುಪಡಿ ಮಾಡಬೇಕೆಂದು ಪರಿಶೀಲನೆ ಮಾಡುತ್ತೀರೊ ಮಾಡಿ. ಫೈನಲ್ ಆಗಿ ತೀರ್ಮಾನ ಮಾಡುತ್ತೇವೆಂದು ಹೇಳಲಿಲ್ಲವಲ್ಲ.

ಶ್ರೀ ವಾಟಾಳ್ ನಾಗರಾಜ್.— ಇವರು ಹೇಳಿದ ಮಾತು ಅರ್ಥವಾಗಿರಬೇಕು.

ಶ್ರೀ ಬಿ. ಶಿವಣ್ಣ.— ಇವರು ಏನು ಅರ್ಜಿದಾರರೆ ?